ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 143 ಸಿಸಿಬಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:18.12.2018

01
Stard
19/12/18

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು–560 001.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ಸುವರ್ಣಸೌಧ
ಬೆಳಗಾವಿ.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೆ. ರಘುಪತಿ ಭಟ್ (ಉಡುಪಿ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1062 ಕ್ಕೆ ಉತ್ತರ ನೀಡುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೆ. ರಘುಪತಿ ಭಟ್ (ಉಡುಪಿ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1062 ಕ್ಕೆ ಸಂಬಂಧಿಸಿದ ಉತ್ತರದ 350 ಹಾಗೂ ಆಂಗ್ಲ ಭಾಷೆಯ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಡಿ. ಧನಂಜಯ)
ಶಾಖಾಧಿಕಾರಿ
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಕೆ ರಘುಪತಿ ಭಟ್ (ಉಡುಪಿ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1602

ಉತ್ತರಿಸಬೇಕಾದ ದಿನಾಂಕ : 19.12.2018

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಾಗಿ 25 ವರ್ಷಗಳು ಕಳೆದರೂ ಇದುವರೆಗೂ ಪ್ರತ್ಯೇಕ ಜಿಲ್ಲಾ ಸಹಕಾರಿ ಬ್ಯಾಂಕ್ ಸ್ಥಾಪಿಸದೇ ಇರಲು ಕಾರಣಗಳೇನು? (ವಿವರ ನೀಡುವುದು)	ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ವಿಭಜಿಸಿ ಉಡುಪಿ ಜಿಲ್ಲೆಗೆ ಹೊಸದಾಗಿ ಪ್ರತ್ಯೇಕ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂ: ಸಿಒ 254 ಸಿಆರ್‌ಸಿ 2008 ದಿನಾಂಕ:02.02.2009ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ, ಗೌ: ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 3699/2009–ಶ್ರೀ ವೇದನಾಥ ಸುವರ್ಣ, ರಿಟ್ ಅರ್ಜಿ ಸಂಖ್ಯೆ: 3700/2009 –ಶ್ರೀ ಎಮ್.ವಾದಿರಾಜ ಶೆಟ್ಟಿ ಮತ್ತು ರಿಟ್ ಅರ್ಜಿ ಸಂಖ್ಯೆ: 3736/2009 – ಶಿರಿಯಾರ ವ್ಯವಸಾಯ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕಿಶನ್ ಹೆಗ್ಡೆ ಕೊಳ್ಕೆಬೈಲ್ ಇವರುಗಳು ದಾಖಲಿಸಿದ್ದು, ಗೌ: ಉಚ್ಛ ನ್ಯಾಯಾಲಯವು ದಿನಾಂಕ 11.08.2011 ರ ಆದೇಶದಲ್ಲಿ ಈ ಮೂರೂ ರಿಟ್ ಅರ್ಜಿಗಳನ್ನೂ ವಜಾಗೊಳಿಸಿ ಆದೇಶ ಹೊರಡಿಸಿರುತ್ತದೆ. ಈ ಆದೇಶಗಳ ವಿರುದ್ಧ ಮಾನ್ಯ ಗೌ: ಉಚ್ಛ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ: 15974/2011ರಲ್ಲಿ ಶ್ರೀ ಎಮ್.ವಾದಿರಾಜ ಶೆಟ್ಟಿ, ರಿಟ್ ಅಪೀಲು ಸಂಖ್ಯೆ:15975/2011ರಲ್ಲಿ ದಕ್ಷಿಣಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಹಾಗೂ ರಿಟ್ ಅಪೀಲು ಸಂಖ್ಯೆ 15980/2011 ರಲ್ಲಿ ಶಿರಿಯಾರ ವ್ಯವಸಾಯ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕಿಶನ್ ಹೆಗ್ಡೆ ಕೊಳ್ಕೆಬೈಲ್‌ರವರಿಂದ ಪ್ರಶ್ನಿಸಲಾಗಿರುತ್ತದೆ. ಸದರಿ ರಿಟ್ ಅಪೀಲುಗಳ ಬಗ್ಗೆ ಮಾನ್ಯ ಕರ್ನಾಟಕ ಗೌ: ಉಚ್ಛ ನ್ಯಾಯಾಲಯದ ದ್ವಿಸದಸ್ಯ ಪೀಠವು ದಿನಾಂಕ:14.02.2012ರಂದು ತೀರ್ಮ ನೀಡಿ, ಪ್ರಕರಣಗಳನ್ನು ವಜಾಗೊಳಿಸಿ ಇತ್ಯರ್ಥಗೊಳಿಸಿರುತ್ತದೆ. ಗೌ: ಕರ್ನಾಟಕ ಉಚ್ಛ ನ್ಯಾಯಾಲಯವು ನೀಡಿದ ಮೇಲಿನ ತೀರ್ಮಗಳನ್ನು ಗೌ: ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ 9168/2012ರಂತೆ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಇವರು ಕರ್ನಾಟಕ ಸರ್ಕಾರದ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು, ಗೌ: ಸರ್ವೋಚ್ಛ ನ್ಯಾಯಾಲಯವು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡು, ದಿನಾಂಕ:30.03.2012ರಂದು ಮಧ್ಯಂತರ ಆದೇಶವನ್ನು ನೀಡಿ "ಉಭಯತ್ರಯರು ಯಥಾಸ್ಥಿತಿಯನ್ನು ಕಾಪಾಡುವಂತೆ" (Both parties are directed to maintain status quo prevailing as on date) ಆದೇಶಿಸಲಾಗಿರುತ್ತದೆ. ಪ್ರಕರಣವು ಸದ್ಯದಲ್ಲಿ "Pending for final hearing" ಎಂದು ಬಾಕಿಯಿರುತ್ತದೆ. ಪ್ರಕರಣವು ಗೌರವ ಸರ್ವೋಚ್ಛ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿಯಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಅನುಗುಣವಾಗಿ ಕ್ರಮವಿಡಲಾಗುವುದು.

ಆ)	ಉಡುಪಿ ಜಿಲ್ಲೆಗೆ ಪ್ರತ್ಯೇಕ ಜಿಲ್ಲಾ ಸಹಕಾರಿ ಬ್ಯಾಂಕ್ ಸ್ಥಾಪಿಸುವ ಬೇಡಿಕೆ ಹಲವಾರು ವರ್ಷಗಳಿಂದ ಇದ್ದರೂ ಈ ಬಗ್ಗೆ ಸರ್ಕಾರ ನಿರ್ಲಕ್ಷ್ಯ ವಹಿಸಲು ಕಾರಣಗಳೇನು?	ಪ್ರಕರಣವು ಗೌ: ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಸರ್ಕಾರದಿಂದ ನಿರ್ಲಕ್ಷ್ಯಯಾಗಿರುವುದಿಲ್ಲ.
ಇ)	ಹಾಗಿದ್ದಲ್ಲಿ ಯಾವಾಗ ಉಡುಪಿ ಜಿಲ್ಲಾ ಸಹಕಾರಿ ಬ್ಯಾಂಕ್ ಪ್ರಾರಂಭಿಸ ಲಾಗುವುದು? (ವಿವರ ನೀಡುವುದು)	ಗೌ: ಸರ್ವೋಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಆದೇಶಾನುಸಾರವಾಗಿ ಕ್ರಮವಿಡಲಾಗುವುದು.

ಸಿಓ 143 ಸಿಸಿಬಿ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:.ವಇ 273 ಹೆಚ್‌ಎಎಂ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಸುವರ್ಣ ಸೌಧ,
ಬೆಳಗಾವಿ, ದಿನಾಂಕ:18/12/2018.

O2
Stard
19/12/18

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನ ಸಭೆ,
ಬೆಳಗಾವಿ.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ ಚುಕ್ಕೆ ~~ಗುರುತಿಲ್ಲದ~~ / ಗುರುತಿರುವ ಪ್ರಶ್ನೆ ಸಂಖ್ಯೆ:1573 ಕ್ಕೆ ಉತ್ತರವನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಪತ್ರ ದಿನಾಂಕ: 02/12/2018

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ ಇವರ ಚುಕ್ಕೆ ~~ಗುರುತಿಲ್ಲದ~~ / ಗುರುತಿರುವ ಪ್ರಶ್ನೆ ಸಂಖ್ಯೆ: 1573 ಗೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
(ಸಹಿ)
(ವೆಂಕಟೇಶ್ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನಸಭೆ

ವಿಧಾನ ಸಭೆ ಸದಸ್ಯರ ಹೆಸರು :	ಮಾನ್ಯ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :	1573
ಉತ್ತರಿಸಬೇಕಾದ ದಿನಾಂಕ :	19.12.2018
ಉತ್ತರಿಸುವ ಸಚಿವರು	ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಪ್ರಶ್ನೆ		ಉತ್ತರ
ಅ)	ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2016-17 ಹಾಗೂ 2017-18ನೇ ಸಾಲಿನ ಬಸವ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆ ಪಟ್ಟಿ ತಡೆಹಿಡಿದಿರುವುದನ್ನು ತೆರವುಗೊಳಿಸಲು ವಿನಂತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ತಡೆಹಿಡಿದಿರುವುದರಿಂದ ತೆರವುಗೊಳಿಸಲು ಅಗತ್ಯವಿರುವ ಕಾಲಮಿತಿಯೆಷ್ಟು (ವಿವರ ನೀಡುವುದು);	2016-17 ಮತ್ತು 2017-18ನೇ ಸಾಲಿನ ಬಸವ ವಸತಿ ಯೋಜನೆಯಡಿ ರಾಮದುರ್ಗ ತಾಲ್ಲೂಕಿಗೆ ಒಟ್ಟು 3576 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು 2208 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಉಳಿದಂತೆ ಜಿಲ್ಲಾ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ ಗ್ರಾಮಪಂಚಾಯಿತಿಗಳ ಲಾಗಿನ್‌ನಲ್ಲಿ 511 ಮನೆಗಳ ಗುರಿಗೆ ಅನುಮೋದನೆ ನೀಡುವುದು ಬಾಕಿಯಿದ್ದು, ಉಳಿದಂತೆ 811 ಮನೆಗಳ ಗುರಿಗೆ ತಕ್ಕಂತೆ ಫಲಾನುಭವಿಗಳನ್ನು ಗ್ರಾಮ ಸಭೆಗಳಲ್ಲಿ ಆಯ್ಕೆಗೊಳಿಸುವುದು ಬಾಕಿ ಇರುತ್ತದೆ. ರಾಮದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಸವ ವಸತಿ ಯೋಜನೆಯಡಿ ಫಲಾನುಭವಿಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ದೂರುಗಳು ಬಂದಿರುವ ಹಿನ್ನಲೆಯಲ್ಲಿ ಹಂಚಿಕೆ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವಂತೆ ಮಾನ್ಯ ವಸತಿ ಸಚಿವರು ಟಿಪ್ಪಣಿ ಮೂಲಕ ಆದೇಶಿಸಿರುವುದರಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿದು ಅನುಮೋದನೆಯಾಗಿರುವ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆಯಾಗಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಕೋರಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ.
ಇ)	ಆಯ್ಕೆ ಪಟ್ಟಿ ತಡೆಹಿಡಿದಿರುವುದರಿಂದ ಫಲಾನುಭವಿಗಳಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಬೆಳಗಾವಿ ಇವರಿಂದ ರಾಮದುರ್ಗ ಕ್ಷೇತ್ರದಡಿ ಬಸವ ವಸತಿ ಯೋಜನೆಯಡಿ ಅನುಮೋದನೆಯಾಗಿರುವ ಫಲಾನುಭವಿಗಳ ಅರ್ಹತೆ ಬಗ್ಗೆ ಪರಿಶೀಲನಾ ವರದಿ ಬಂದ ತಕ್ಷಣ, ಆಯ್ಕೆ ಪ್ರಕ್ರಿಯೆಗೆ ತಾತ್ಕಾಲಿಕವಾಗಿ ನೀಡಲಾಗಿರುವ ತಡೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು.
ಈ)	ಬಂದಿದ್ದಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ನೀತಿ ರೂಪಿಸಿದೆ (ವಿವರ ನೀಡುವುದು)?	

ಕಡತ ಸಂಖ್ಯೆ: ವಇ 273 ಹೆಚ್‌ಎಎಂ 2018

(ಯು.ಟಿ ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

Starred
3

(3)

ಕರ್ನಾಟಕ ವಿಧಾನಸಭೆ

ವಿಧಾನ ಸಭೆ ಸದಸ್ಯರ ಹೆಸರು :	ಮಾನ್ಯ ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ.
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :	1977
ಉತ್ತರಿಸಬೇಕಾದ ದಿನಾಂಕ :	19.12.2018
ಉತ್ತರಿಸುವ ಸಚಿವರು	ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಅಂಗವಿಕಲರಿಗೆ ವಸತಿ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ;	ಅಂಗವಿಕಲರೂ ಸೇರಿದಂತೆ ರಾಜ್ಯದ ಜನತೆಗೆ ಕೆಳಕಂಡ ವಸತಿ ಯೋಜನೆಗಳು ಇರುತ್ತವೆ. ಡಾ. ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ / ವಾಜಪೇಯಿ ನಗರ ವಸತಿ ಯೋಜನೆ / ದೇವರಾಜ ಅರಸು ವಸತಿ ಯೋಜನೆ / ಪ್ರಧಾನ ಮಂತ್ರಿ ಆವಾಸ್ ಯೋಜನೆ / ಬಸವ ವಸತಿ ಯೋಜನೆ
ಆ)	ನಿವೇಶನ ಹೊಂದಿರುವ ಅಂಗವಿಕಲರಿಗೆ ಮನೆ ನಿರ್ಮಿಸಿಕೊಡಲು ಸರ್ಕಾರ ಆರ್ಥಿಕ ನೆರವನ್ನು ಒದಗಿಸುವ ಯೋಜನೆಗಳನ್ನು ರೂಪಿಸಿದೆಯೇ;	ನಿಯಮಾನುಸಾರದಂತೆ ಅರ್ಹ ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಹೊರತುಪಡಿಸಿ, ವಿಶೇಷವಾಗಿ ಅಂಗವಿಕಲ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಡಲು ಆರ್ಥಿಕ ನೆರವನ್ನು ಒದಗಿಸುವ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.
ಇ)	ಹಾಗಿದ್ದಲ್ಲಿ, ಸರ್ಕಾರದಿಂದ ಆರ್ಥಿಕ ನೆರವನ್ನು ಪಡೆಯಲು ಯಾವ ಕಛೇರಿಗೆ ಯಾವ ದಾಖಲಾತಿಗಳನ್ನು ಎಷ್ಟು ಸಮಯದೊಳಗಾಗಿ ಸಲ್ಲಿಸಬೇಕಾಗಿರುತ್ತದೆ;	ಗ್ರಾಮೀಣ ಪ್ರದೇಶವಾಗಿದ್ದಲ್ಲಿ ಗ್ರಾಮ ಪಂಚಾಯತಿಗಳು ಹಾಗೂ ನಗರ ಪ್ರದೇಶವಾಗಿದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳನ್ನು ಸಂಪರ್ಕಿಸಿ ಕೆಳಕಂಡ ದಾಖಲಾತಿಗಳೊಂದಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಆಧಾರ್ ಕಾರ್ಡ್ / ಜಾತಿ ಮತ್ತು ಆದಾಯ ಪ್ರಮಾಣ ಪತ್ರ / ಪಡಿತರ ಚೀಟಿ / ಚುನಾವಣಾ ಗುರುತಿನ ಚೀಟಿ / ಹಕ್ಕಿನ ಪತ್ರ / ಆಸ್ತಿಗೆ ಸಂಬಂಧಿಸಿದ ಖಾತಾ ಪತ್ರ
ಈ)	ರಾಜ್ಯದಲ್ಲಿರುವ ನಿವೇಶನ ಮತ್ತು ವಸತಿ ರಹಿತ ಅಂಗವಿಕಲರಿಗೆ ಸರ್ಕಾರದಿಂದ ಉಚಿತವಾಗಿ ಮನೆಗಳನ್ನು ನಿರ್ಮಿಸಿ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇರುವುದಿಲ್ಲ.
ಉ)	ಹಾಗಿದ್ದಲ್ಲಿ, ಯಾವಾಗ, ಎಷ್ಟು ಮನೆಗಳನ್ನು ನಿರ್ಮಿಸಿ ಕೊಡಲಾಗುವುದು? (ವಿವರ ನೀಡುವುದು)	ಅನ್ವಯಿಸುವುದಿಲ್ಲ

ಕಡತ ಸಂಖ್ಯೆ: ವಇ 274 ಹೆಚ್‌ಎಎಂ 2018

(ಯು ಟಿ ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

K

ಕರ್ನಾಟಕ ಸರ್ಕಾರ

ಸಂಖ್ಯೆ:.ವಇ 155 ವಿಶ(ಪ್ರಶ್ನೆ) 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಸುವರ್ಣ ಸೌಧ,
ಬೆಳಗಾವಿ, ದಿನಾಂಕ: 18 /12/2018.

04

Stand 19/12/18

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನ ಸಭೆ,
ಬೆಳಗಾವಿ.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ ಚುಕ್ಕೆ ~~ಗುರುತಿಲ್ಲದ~~ / ಗುರುತಿರುವ ಪ್ರಶ್ನೆ ಸಂಖ್ಯೆ: 1608 ಕ್ಕೆ ಉತ್ತರವನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಪತ್ರ ದಿನಾಂಕ:__ /11/2018

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ. ಜಿ.ಹೆಚ್. ತಿಪ್ಪಾರೆಡ್ಡಿ. (ಚಿತ್ರದುರ್ಗ) ಇವರ ಚುಕ್ಕೆ ~~ಗುರುತಿಲ್ಲದ~~ / ಗುರುತಿರುವ ಪ್ರಶ್ನೆ ಸಂಖ್ಯೆ: 1608 ಗೆ ಉತ್ತರದ 350 [redacted] ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
S. Venkatesh
(ವೆಂಕಟೇಶ್ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವಸತಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1608
ವಿಧಾನ ಸಭೆಯ ಸದಸ್ಯರ ಹೆಸರು	ಶ್ರೀ ಜಿ.ಎಚ್.ತಿಪ್ಪಾರೆಡ್ಡಿ (ಚಿತ್ರದುರ್ಗ)
ಉತ್ತರಿಸಬೇಕಾದ ದಿನಾಂಕ	19/12/2018
ಉತ್ತರಿಸುವ ಸಚಿವರು	ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೇಂದ್ರ ಪುರಸ್ಕೃತ 'ರೇ' ಯೋಜನೆಯಡಿ 1563 ಮನೆಗಳು ಚಿತ್ರದುರ್ಗ ನಗರಕ್ಕೆ ಯಾವ ವರ್ಷ ಮಂಜೂರಾಗಿರುತ್ತದೆ;	2013-14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ರಾಜೀವ್ ಆವಾಸ್ ಯೋಜನೆಯಡಿ (ರೇ) ಚಿತ್ರದುರ್ಗ ನಗರದಲ್ಲಿ 1563 ಮನೆಗಳನ್ನು ನಿರ್ಮಿಸಲು ಮಂಜೂರಾಗಿರುತ್ತದೆ.
ಆ)	ಕಾಮಗಾರಿ ಅನುಮೋದನೆಯಾದ ಸಂದರ್ಭದಲ್ಲಿ ಫಲಾನುಭವಿಯ ವಂತಿಕೆಯು ಘಟಕ ವೆಚ್ಚದ ಶೇಕಡವಾರು (10% ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳು ಮತ್ತು ಶೇಕಡ 12% ರಷ್ಟು ಇತರೆ ಹಿಂದುಳಿದ ವರ್ಗ/ಅಲ್ಪಸಂಖ್ಯಾತರು/ ಸಾಮಾನ್ಯ ವರ್ಗದ ಫಲಾನುಭವಿಗಳು) ಹಣವನ್ನು ಪಾವತಿಸುವುದಕ್ಕೆ ಸರ್ಕಾರಿ ಆದೇಶ ಮಾಡಲಾಗಿದೆಯೇ (ವಿವರ ಒದಗಿಸುವುದು);	ಈ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಫಲಾನುಭವಿಯ ವಂತಿಕೆಯು ಘಟಕ ವೆಚ್ಚದ ಶೇ.10 ರಷ್ಟು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳು/ ಹಿಂದುಳಿದ ವರ್ಗ / ಅಲ್ಪಸಂಖ್ಯಾತರು ಮತ್ತು ಶೇ.12 ರಷ್ಟು ಇತರೆ ಸಾಮಾನ್ಯ ವರ್ಗದ ಫಲಾನುಭವಿಗಳು ಹಣವನ್ನು ಭರಿಸಬೇಕಾಗಿರುತ್ತದೆ. ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.
ಇ)	ಸರ್ಕಾರದ ಹೊಸ ಆದೇಶ ಮತ್ತು ಯೋಜನಾ ಮಾರ್ಗಸೂಚಿಯನ್ವಯ ಫಲಾನುಭವಿಯ ವಂತಿಕೆ ಹಣ ಶೇಕಡ 10 ರಿಂದ ಶೇಕಡ 25 ರಷ್ಟು ಏರಿಕೆಯಾಗಿರುವುದಾಗಿ ತಿಳಿಸಿ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಯಿಂದ ಪಡೆಯಲು ಸೂಚಿಸಲಾಗಿದೆಯೇ;	ಕೇಂದ್ರ ಸರ್ಕಾರದ ಪತ್ರ ದಿನಾಂಕ: 22-12-2016 ರಲ್ಲಿ 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳಿಗೆ ತನ್ನ ಪಾಲಿನ ಮೊತ್ತವನ್ನು ಶೇ.75 ರಷ್ಟು ಬದಲಾಗಿ ಶೇ.60 ರಷ್ಟು ಇಳಿಕೆ ಮಾಡಿರುವುದರಿಂದ ಪೌರಾಡಳಿತ ನಿರ್ದೇಶನಾಲಯ ರವರು ತಮ್ಮ ಪತ್ರ ಸಂಖ್ಯೆ: 12323, ಡಿಎಂಎ 37 ರಾಆಯೋ 2015-16 ದಿನಾಂಕ: 19-02-2016 ರಲ್ಲಿ ಘಟಕದ ವೆಚ್ಚದ ಶೇ.10 ಮತ್ತು 12 ರಷ್ಟು ಬದಲಾಗಿ ಶೇ.25 ರಷ್ಟು ವಂತಿಕೆ ಮೊತ್ತವನ್ನು ಸಂಗ್ರಹಿಸಲು ತಿಳಿಸಿರುತ್ತಾರೆ. ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. ಪೌರಾಯುಕ್ತರು, ನಗರಸಭೆ ಚಿತ್ರದುರ್ಗ ಇವರ ವತಿಯಿಂದ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಸಂಬಂಧಪಟ್ಟ ಫಲಾನುಭವಿಗಳಿಗೆ ತಿಳುವಳಿಕೆ ಪತ್ರದ ಮೂಲಕ ತಿಳಿಸಲಾಗಿದೆ.
ಈ)	ಅದರಂತೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಫಲಾನುಭವಿಗಳು ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಂತಿಕೆಯ ವ್ಯತ್ಯಾಸದ ಮೊತ್ತವನ್ನು ಪಾವತಿಸುವಂತೆ ಫಲಾನುಭವಿಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ತಿಳುವಳಿಕೆ ಪತ್ರ ನೀಡಿದ್ದು, ಫಲಾನುಭವಿಗಳು ಈವರೆವಿಗೂ ವ್ಯತ್ಯಾಸದ ಮೊತ್ತವನ್ನು ಪಾವತಿಸಿರುವುದಿಲ್ಲ.
ಉ)	ಹಾಗಿದ್ದಲ್ಲಿ, ಪರಿಶಿಷ್ಟ ಜಾತಿಗೆ ಸೇರಿದ 779 ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 48 ಒಟ್ಟು 927 ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿಗಮಗಳಿಂದ ವ್ಯತ್ಯಾಸದ	ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಹೊರೆಯಾಗುವ ಹಿತದೃಷ್ಟಿಯಿಂದ ನಗರಾಭಿವೃದ್ಧಿ ಇಲಾಖೆಯ 2016-17ನೇ ಸಾಲಿಗೆ ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿ ಬಳಕೆಯಾಗದ ಅನುದಾನದಡಿ ಬಿಡುಗಡೆ ಮಾಡಿದ ಮೊತ್ತದಲ್ಲಿ

	ಮೊತ್ತವನ್ನು ಭರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶೇ.15 ರಷ್ಟು ಮೊತ್ತವನ್ನು ಫಲಾನುಭವಿಗಳ ವಂತಿಕೆಗೆ ಹೊಂದಣಿಕೆ ಮಾಡಿಕೊಳ್ಳಲಾಗಿದೆ.
ಖ)	ಈ ಯೋಜನೆಯಲ್ಲಿರುವ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ಸಾಮಾನ್ಯ / ಇತರೆ ವರ್ಗಕ್ಕೆ ಸೇರಿದ ಆಯಾ ನಿಗಮ, ಮಂಡಳಿಗಳಿಂದ ವಂತಿಕೆಯ ವ್ಯತ್ಯಾಸದ ಮೊತ್ತವನ್ನು ಭರಿಸಲು ದಿನಾಂಕ: 11.12.2017 ರಲ್ಲಿ ಪೌರಾಯುಕ್ತರು ಪತ್ರ ಬರೆದಿದ್ದು, ಈವರೆವಿಗೂ ವ್ಯತ್ಯಾಸದ ಹಣ ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಅಲ್ಪಸಂಖ್ಯಾತ / ಹಿಂದುಳಿದ ವರ್ಗದ ಫಲಾನುಭವಿಗಳ ವಂತಿಕೆಯ ಮೊತ್ತವನ್ನು ಭರಿಸುವ ಕುರಿತಂತೆ ಯೋಜನೆಯ ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರನ್ನು ಕೋರಲಾಗಿದ್ದು, ಫಲಾನುಭವಿಗಳ ವಂತಿಕೆ ಮೊತ್ತವನ್ನು ನಿರೀಕ್ಷಿಸಲಾಗಿದೆ. ಮುಂದುವರೆದು, ನಗರ ಸ್ಥಳೀಯ ಸಂಸ್ಥೆಯಲ್ಲಿ ಪ್ರತಿ ವರ್ಷ ಲಭ್ಯವಾಗುವ ಅನುದಾನದಲ್ಲಿ **ಶೇ.7.25 ರಷ್ಟು** ಅನುದಾನವನ್ನು ಇತರೆ ಹಿಂದುಳಿದ ಜನಾಂಗಳ ಅಭಿವೃದ್ಧಿಗೆ ಕಾಯ್ದಿರಿಸಬೇಕಾಗಿರುತ್ತದೆ. ಸದರಿ ಅನುದಾನದ ಮಾರ್ಗಸೂಚಿಯಲ್ಲಿ ಅಲ್ಪಸಂಖ್ಯಾತ / ಹಿಂದುಳಿದ ವರ್ಗದ ಫಲಾನುಭವಿಗಳ ವಂತಿಕೆಯ ಮೊತ್ತವನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಸ್ಥಳೀಯ ಸಂಸ್ಥೆಯು ಕ್ರಮವಹಿಸಬಹುದಾಗಿದೆ.
ಖು)	ಹಣ ಬಿಡುಗಡೆ ಆಗದೇ ಇರುವುದರಿಂದ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದ್ದಿದಲ್ಲಿ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?	ಫಲಾನುಭವಿಗಳು ತಮ್ಮ ವಂತಿಕೆ ಮೊತ್ತವನ್ನು ನಿಗಧಿತ ಸಮಯದಲ್ಲಿ ಪಾವತಿಸದೆ ಇರುವುದರಿಂದ ಕಾಮಗಾರಿಯ ಪ್ರಗತಿಯಲ್ಲಿ ವಿಳಂಭವಾಗಿರುತ್ತದೆ. ಈ ಯೋಜನೆಯಡಿ ಮಂಜೂರಾದ 1563 ಮನೆಗಳ ಪೈಕಿ. 1483 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಅದರಲ್ಲಿ 1304 ಮನೆಗಳು ಭೌತಿಕವಾಗಿ ಪೂರ್ಣಗೊಂಡು 1018 ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ. ಉಳಿಕೆ 80 ಮನೆಗಳನ್ನು ಫಲಾನುಭವಿಗಳು ಶೇ.10 ರಷ್ಟು ಫಲಾನುಭವಿಯ ವಂತಿಕೆಯನ್ನು ಸಹ ಪಾವತಿಸದೆ ಇರುವುದರಿಂದ ಅದರಲ್ಲಿ 40 ಮನೆಗಳು ಎಸ್‌ಸಿ / ಎಸ್‌ಟಿ ಜನಾಂಗದವರಾಗಿದ್ದು, ಇವರ ಮೊತ್ತವನ್ನು 2018-19ನೇ ಸಾಲಿನ ಎಸ್‌ಸಿಪಿ / ಟಿಎಸ್‌ಪಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಇತರೆ ವರ್ಗದ 40 ಮನೆಗಳಿಗೆ ಬ್ಯಾಂಕ್‌ಗಳ ಮೂಲಕ ಸಾಲದ ರೂಪದಲ್ಲಿ ಅಥವಾ ಸ್ಥಳೀಯ ಸಂಸ್ಥೆಯಿಂದ ಫಲಾನುಭವಿಯ ವಂತಿಕೆ ಮೊತ್ತವನ್ನು ಭರಿಸಿ ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ವಇ 155 ಹೆಚ್‌ಎಫ್‌ಎ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಅನುಬಂಧ - 1

8. **Funding Pattern**

8.1. The funding pattern is as per the table below:

Category	Type of City/Urban Agglomerations (UA) as per 2011 Census	Component	Contribution of Centre (%)	State (%)	ULB (%)	Beneficiaries (%)
A	Cities/ UAs with Population 5 lakhs and above	Housing	50	25	-	25
		Infrastructure	50	25	25	0
B	Cities/ UAs having population less than 5 lakhs	Housing	75	15	-	10
		Infrastructure	75	15	10	0
C	Cities / UAs in North-Eastern Region and special category States (Jammu & Kashmir, Himachal Pradesh & Uttarakhand)	Housing	80	10	-	10
		Infrastructure	80	10	10	0

8.2. There will be an upper ceiling of ₹ 5 lakh per DU for cities with population more than 5 lakhs. This ceiling would be at ₹ 4 lakhs per DU for smaller cities with population less than 5 lakhs. In North East (NE) and special category States, upper ceiling would be at ₹ 5 lakh per DU irrespective of population of the city. Upper ceilings, as above, would also include cost of civic infrastructure and social amenities.

8.3. Cost of civic infrastructure and social amenities per DU should not exceed 25% of the cost.

8.4. Land cost will not be admissible for Central Government funding under the scheme.

8.5. Funds available under MPLAD/MLALAD may be used as a substitute for ULB share. The ULB share can also be borne by the State/UT or vice versa.

8.6. Beneficiary contribution is necessary to bring sense of ownership among the beneficiaries and is provided at the minimum of 10% in the case of SC/ST/OBC/PH/single woman/other weaker and vulnerable sections and 12% in case of general category.

ಅನುಬಂಧ-2

53

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 2286630:
ಫ್ಯಾಕ್ಸ್: 080-22863576 / 22861665
Email: dmablr@gmail.com
9ನೇ ಮಹಡಿ, ವಿಶ್ವೇಶ್ವರಯ್ಯಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸಂಖ್ಯೆ :12323, ಡಿಎಂಎ 37 ರಾಆಯೋ 2015-16

ದಿನಾಂಕ:19.02.2016

ರವರಿಗೆ,

ಆಯುಕ್ತರು/ ಪೌರಾಯುಕ್ತರು

..............________ಮಹಾನಗರ ಪಾಲಿಕೆ/ ನಗರಸಭೆ

ಜಿಲ್ಲೆ.

ಮಾನ್ಯರೇ,

ವಿಷಯ: ರಾಜೀವ್ ಆವಾಸ್ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯಗಳ ವೆಚ್ಚ ಶೇ.25 ರಷ್ಟನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಭರಿಸುವ ಕುರಿತು.

ಉಲ್ಲೇಖ: ದಿನಾಂಕ:12.02.2016 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಎಸ್.ಡಿ.ಬಿಯವರು ವಿವಿಧ ನಗರಗಳ ಆಯ್ದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡವರಿಗೆ ಮೂಲಭೂತ ಸೌಕರ್ಯಗಳೊಂದಿಗೆ ವಸತಿಗೃಹಗಳನ್ನು ಒದಗಿಸಲು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಡಿ.ಪಿ.ಆರ್‌ಗಳನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದಿದ್ದು, ಅವುಗಳನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪಾಲನ್ನು ನೀಡುವ ಅವಶ್ಯಕತೆ ಇರಲಿಲ್ಲ ಹಾಗೂ ಫಲಾನುಭವಿಗಳ ವಂತಿಕೆ ಮೊತ್ತವು 10 ರಿಂದ 12 % ಕ್ಕೆ ಮಾತ್ರವೇ ಸೀಮಿತವಾಗಿತ್ತು.

ನಗರಗಳು	ವಿವರಗಳು	ಆರ್ಥಿಕ ಮಾದರಿ (ಶೇ)			
		ಕೇಂದ್ರ	ರಾಜ್ಯ	ಯು.ಎಲ್.ಬಿ	ಫಲಾನುಭವಿ
5 ಲಕ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಹೊಂದಿರುವ	ವಸತಿ	50	40	0	10
	ಮೂಲಭೂತ ಸೌಕರ್ಯ	50	50	0	0
5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ	ವಸತಿ	75	15	0	10
	ಮೂಲಭೂತ ಸೌಕರ್ಯ	75	25	0	0

ಆದರೆ ಆರ್ಥಿಕ ಇಲಾಖೆಯ ನಿರ್ದೇಶನದ (FD 517 Exp-9 / 2015) ಮೇರೆಗೆ ನಗರಾಭಿವೃದ್ಧಿ ಇಲಾಖೆಯು ದಿನಾಂಕ 29.09.2015 ರ ಪತ್ರದಲ್ಲಿ ಸೂಚಿಸಿರುವಂತೆ ರಾಜ್ಯ ಸರ್ಕಾರವು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಗಳಿಗೆ ಅನುದಾನ ಒದಗಿಸಲು ತೀರ್ಮಾನಿಸಿತು.

ನಗರಗಳು	ವಿವರಗಳು	ಆರ್ಥಿಕ ಮಾದರಿ (ಶೇ)			
		ಕೇಂದ್ರ	ರಾಜ್ಯ	ಯು.ಎಲ್.ಬಿ	ಫಲಾನುಭವಿ
5 ಲಕ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಹೊಂದಿರುವ	ವಸತಿ	50	25	0	25
	ಮೂಲಭೂತ ಸೌಕರ್ಯ	50	25	25	0
5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ	ವಸತಿ	75	15	0	10
	ಮೂಲಭೂತ ಸೌಕರ್ಯ	75	15	10	0

Asha B
Assistant General Manager
Rajiv Gandhi Rural Housing Corporation Limited

ಮುಂದುವರೆದು ಕೇಂದ್ರ ಸರ್ಕಾರವು ಪತ್ರ ದಿನಾಂಕ 22.12.2016 ರಲ್ಲಿ ಸೂಚಿಸಿರುವಂತೆ, 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳಿಗೆ ಕೇಂದ್ರದ ಪಾಲಿನ ಮೊತ್ತವನ್ನು 75% ಬದಲಾಗಿ 60% ಇಳಿಕೆ ಮಾಡಿರುತ್ತದೆ.

ಇದರನ್ವಯ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಗೆ ಒದಗಿಸಬೇಕಾದ ಅನುದಾನದ ಆರ್ಥಿಕ ಮಾದರಿಯು ಕೆಳಕಂಡಂತಿದೆ.

ನಗರಗಳು	ವಿವರಗಳು	ಆರ್ಥಿಕ ಮಾದರಿ (ಶೇ)			
		ಕೇಂದ್ರ	ರಾಜ್ಯ	ಯು.ಎಲ್.ಬಿ	ಫಲಾನುಭವಿ
5 ಲಕ್ಷಕ್ಕಿಂತ ಮೇಲ್ಪಟ್ಟ ಜನಸಂಖ್ಯೆ ಹೊಂದಿರುವ	ವಸತಿ	50	25	0	25
	ಮೂಲಭೂತ ಸೌಕರ್ಯ	50	25	25	0
5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ	ವಸತಿ	60	15	0	25
	ಮೂಲಭೂತ ಸೌಕರ್ಯ	60	15	25	0

ಆರ್ಥಿಕ ಮಾದರಿಯಲ್ಲಾದ ಬದಲಾವಣೆಯಿಂದಾಗಿ ಈಗ ನಗರ ಸ್ಥಳೀಯ ಸಂಸ್ಥೆಗಳು ಯೋಜನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಿಗದಿಪಡಿಸಿದ ಮೊತ್ತದ 25% ರಷ್ಟನ್ನು ತಮ್ಮ ಪಾಲಿನ ಮೊತ್ತವಾಗಿ ಭರಿಸಬೇಕಿದೆ.

ಹಾಗೂ ಫಲಾನುಭವಿಗಳೂ ಕೂಡ ವಂತಿಕೆ ಮೊತ್ತವನ್ನು ಘಟಕ ವೆಚ್ಚದ 10-12% ಬದಲಾಗಿ 25% ರಷ್ಟು ಪಾವತಿಸಬೇಕಾಗಿರುತ್ತದೆ.

ಆದ್ದರಿಂದ ತಾವುಗಳು ಮೂಲಭೂತ ಸೌಕರ್ಯಗಳಿಗೆ ಅನುಮೋದಿತ ಮೊತ್ತದ ಶೇ 25 ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳ ತಮ್ಮ ಪಾಲಿನ ಮೊತ್ತವಾಗಿ ಭರಿಸಲು ಹಾಗೂ ಫಲಾನುಭವಿಗಳಿಂದ ಒಂದು ಘಟಕ ವೆಚ್ಚದ ಶೇ 25 ರಷ್ಟು ಮೊತ್ತವನ್ನು ವಂತಿಕೆಯಾಗಿ ಸಂಗ್ರಹಿಸಲು ಸೂಕ್ತ ಕ್ರಮ ಕೈಗೊಳ್ಳಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ-

ತಮ್ಮ ವಿಶ್ವಾಸಿ,

ಮುಖ್ಯ ಯೋಜನಾಧಿಕಾರಿ
ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

Asha S
Assistant General Manager (PI)
Rajiv Gandhi Rural Housing Corporation Limited

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ, 2 ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು
3. ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ________________ ಜಿಲ್ಲೆ.
4. ಜಂಟಿ ನಿರ್ದೇಶಕರು(ಯೋಜನೆ), ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು
5. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ________________ ಜಿಲ್ಲೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 183 CBR 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಸುವರ್ಣ ವಿಧಾನ ಸೌಧ,
ಬೆಳಗಾವಿ, ದಿನಾಂಕ: 18 -12-2018.

05

Stard
19/12/2018

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆಯ / ~~ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ನೆಹರು ಓಲೇಕಾರ್ (ಹಾವೇರಿ). ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1666 ಕ್ಕೆ ಉತ್ತರ ಒದಗಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ / ~~ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ನೆಹರು ಓಲೇಕಾರ್ (ಹಾವೇರಿ). ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1666 ಕ್ಕೆ ಕನ್ನಡ ಭಾಷೆಯ ಉತ್ತರದ 350 ಪ್ರತಿಗಳನ್ನು ಹಾಗೂ ಆಂಗ್ಲ ಭಾಷೆಯ ಉತ್ತರದ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

18/12/18
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1666
ಸದಸ್ಯರ ಹೆಸರು : ಶ್ರೀ ನೆಹರು ಓಲೇಕರ್(ಹಾವೇರಿ)
ಉತ್ತರಿಸುವ ದಿನಾಂಕ : 19.12.2018
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಹಾವೇರಿ ತಾಲ್ಲೂಕಿನ ಹಂಶಿ ಶಾಖಾರ ಹೊಳೆಯಿಂದ ಆಚೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಹಂಶಿ ಶಾಖಾರದಿಂದ ಹಾವೇರಿ ತಾಲ್ಲೂಕಿಗೆ ಹೊಳಲು ಮಾರ್ಗವಾಗಿ ಬರಬೇಕಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ;	ಹಂಶಿ ಮತ್ತು ಶಾಖಾರದ ಗ್ರಾಮಸ್ಥರು ಹಾವೇರಿಗೆ ಬರಲು ಹಡಗಲಿ ಮಾಗಳ ಜಿಲ್ಲಾ ಮುಖ್ಯ ರಸ್ತೆ ಮುಖಾಂತರ ಹೊಳಲು ತಲುಪಿ ಎಕ್ಕುಂಬಿ ಮೊಳಕಾಲ್ಮೂರು ರಾಜ್ಯ ಹೆದ್ದಾರಿ-2 ರ ಕಿಮೀ 88.49 ರಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಮುಖಾಂತರ ಗುತ್ತಲ ಮಾರ್ಗವಾಗಿ ಪ್ರಯಾಣಿಸಬೇಕಾಗುತ್ತದೆ. ಈಗ ಗ್ರಾಮಸ್ಥರು ಉಪಯೋಗಿಸುವ ಮಾರ್ಗವು ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳಾಗಿದ್ದು ಸರ್ವಋತು ರಸ್ತೆಗಳಾಗಿವೆ, ಮತ್ತು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತವೆ.
ಇ)	ಬಂದಿದ್ದಲ್ಲಿ, ಹಂಶಿ ಮತ್ತು ಹಾವನೂರು ಮಧ್ಯೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ವಿವರ ನೀಡುವುದು)?	ಹಂಶಿ ಮತ್ತು ಹಾವನೂರು ಗ್ರಾಮಕ್ಕೆ ಸುಮಾರು 5 ಕಿಮೀ ಅಂತರದಲ್ಲಿ ಎಕ್ಕುಂಬಿ-ಮೊಳಕಾಲ್ಮೂರು ರಸ್ತೆಯಲ್ಲಿ ಹೊಳೆಗೆ ಅಡ್ಡಲಾಗಿ ಹಾಲಿ ಸೇತುವೆಯು ಸುಸ್ಥಿತಿಯಲ್ಲಿರುವುದರಿಂದ, ಈ ಗ್ರಾಮಗಳ ನಡುವೆ ಸುಲಭವಾಗಿ ಸಂಪರ್ಕ ಸಾಧಿಸಬಹುದಾಗಿರುವುದರಿಂದ, ಹಂಶಿ ಮತ್ತು ಹಾವನೂರು ಮಧ್ಯೆ ಮತ್ತೊಂದು ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಲೋಇ 183 ಸಿಬಿಆರ್ 2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 268 CSS 2018 | ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18 -12-2018

06

Stard 19/12/18

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ಸುವರ್ಣಸೌಧ,
ಬೆಳಗಾವಿ.

ಮಾನ್ಯರೆ,

ವಿಷಯ:- ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಜಿ.ಬಿ. ಜ್ಯೋತಿ ಗಣೇಶ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1691 ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಮಾನ್ಯ ಸದಸ್ಯರಾದ ಶ್ರೀ ಜಿ.ಬಿ. ಜ್ಯೋತಿ ಗಣೇಶ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1691 ಕ್ಕೆ ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

K. Nagesh

(ಕೆ.ನಾಗೇಶ್)
ಶಾಖಾಧಿಕಾರಿಗಳು (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1391
ಸದಸ್ಯರ ಹೆಸರು : ಶ್ರೀ ಜಿ. ಬಿ. ಜ್ಯೋತಿ ಗಣೇಶ್ (ತುಮಕೂರು ನಗರ)
ಉತ್ತರಿಸಬೇಕಾದ ದಿನಾಂಕ : 19-12-2018
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ನಗರಗಳು ಆಯ್ಕೆ ಆಗಿದೆ. ಆಯ್ಕೆಗೊಂಡಿರುವ ಪ್ರತಿ ನಗರದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿರುವ "ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" ಸಭೆಗಳು ಎಷ್ಟೆಷ್ಟು ಬಾರಿ ನಡೆದಿದೆ (ಪ್ರತಿ ಸಭೆಯ ನಡಾವಳಿಗಳನ್ನು ನೀಡುವುದು);</td><td>ಸ್ಮಾರ್ಟ್ ಸಿಟಿ ಅಭಿಯಾನದಡಿ ರಾಜ್ಯದಿಂದ ಈ ಕೆಳಗಿನ 7 ಮಹಾನಗರಗಳು ಆಯ್ಕೆಯಾಗಿರುತ್ತವೆ.
1. ಬೆಳಗಾವಿ 2. ದಾವಣಗೆರೆ 3. ಹುಬ್ಬಳ್ಳಿ-ಧಾರವಾಡ 4. ಶಿವಮೊಗ್ಗ 5. ಮಂಗಳೂರು 6. ತುಮಕೂರು ಮತ್ತು 7. ಬೆಂಗಳೂರು.

"ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" ಸಭೆಗಳ ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ | ನಗರಗಳು | ಸಭೆಗಳ (ಸಂಖ್ಯೆ)
1 | ಬೆಳಗಾವಿ | 2
2 | ದಾವಣಗೆರೆ | 1
3 | ಹುಬ್ಬಳ್ಳಿ-ಧಾರವಾಡ | 5
4 | ಮಂಗಳೂರು | 4
5 | ಶಿವಮೊಗ್ಗ | 1
6 | ತುಮಕೂರು | 1
7 | ಬೆಂಗಳೂರು | 0

ಈ ಸಭೆಗಳ ನಡಾವಳಿಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಸ್ಮಾರ್ಟ್ ಸಿಟಿ ಕಂಪನಿಯಿಂದ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು "ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" ಸಭೆಯಲ್ಲಿ ಇಟ್ಟು ಚರ್ಚಿಸಲಾಗಿದೆಯೇ?; ಸಭೆಯನ್ನು ಎಷ್ಟು ದಿನಗಳಿಗೆ ಒಮ್ಮೆ ನಡೆಸಬೇಕು; ಈ ಸಭೆಗೆ ಸ್ಥಳೀಯ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆಯೇ;</td><td>ಸ್ಮಾರ್ಟ್ ಸಿಟಿ ಕಂಪನಿಯಿಂದ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು "ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" ಸಭೆಯಲ್ಲಿ ಇಟ್ಟು ಚರ್ಚಿಸಲಾಗಿರುತ್ತದೆ.

"ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ"ನ ಸಭೆಯನ್ನು ಎಷ್ಟು ದಿನಗಳಿಗೆ ಒಮ್ಮೆ ನಡೆಸಬೇಕೆಂಬುದನ್ನು ನಿಖರವಾಗಿ ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಯಲ್ಲಿ ತಿಳಿಸಿರುವುದಿಲ್ಲ.

ಈ ಸಭೆಗೆ ಸ್ಥಳೀಯ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿರುವ ಸ್ಮಾರ್ಟ್ ಸಿಟಿ ರಿವ್ಯೂ ಅಂಡ್ ಇಂಪ್ಲಿಮೆಂಟೇಷನ್ ಕಮಿಟಿ ಸಭೆಗಳನ್ನು ಯಾವ ಯಾವ ನಗರಗಳಲ್ಲಿ ಎಷ್ಟೆಷ್ಟು ಬಾರಿ ನಡೆಸಲಾಗಿದೆ (ಸಭೆಯ ನಡಾವಳಿಗಳನ್ನು ನೀಡುವುದು).</td><td>ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಲಾದ ಸ್ಮಾರ್ಟ್ ಸಿಟಿ 'ರಿವ್ಯೂ ಅಂಡ್ ಇಂಪ್ಲಿಮೆಂಟೇಷನ್ ಕಮಿಟಿ' ಸಭೆಗಳ ವಿವರಗಳು ಈ ಕೆಳಕಂಡಂತಿವೆ:

ಕ್ರ.ಸಂ | ನಗರಗಳು | ಸಭೆಗಳ (ಸಂಖ್ಯೆ)
1 | ಬೆಳಗಾವಿ | 1
2 | ದಾವಣಗೆರೆ | 1
3 | ಹುಬ್ಬಳ್ಳಿ-ಧಾರವಾಡ | 2
4 | ಮಂಗಳೂರು | 1
5 | ಶಿವಮೊಗ್ಗ | 2
6 | ತುಮಕೂರು | 1
7 | ಬೆಂಗಳೂರು | 0

ಈ ಸಭೆಗಳ ನಡಾವಳಿಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.</td></tr>
</table>

ಈ)	ಸ್ಮಾರ್ಟ್ ಸಿಟಿ ಕಂಪನಿಯಿಂದ ಕೈಗೊಂಡಿರುವ ಎಲ್ಲಾ ಕಾಮಗಾರಿಗಳ ಪ್ರಗತಿ ಈ ಸಭೆಗೆ ಆಯಾ ನಗರಗಳ ಚುನಾಯಿತ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆಯೆ? (ನಗರವಾರು ಹಾಗೂ ಯೋಜನಾವಾರು ಮಾಹಿತಿ ನೀಡುವುದು).	ಸ್ಮಾರ್ಟ್ ಸಿಟಿ ಕಂಪನಿಗಳಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಗತಿಸಭೆಗೆ ಆಯಾ ನಗರಗಳ ಚುನಾಯಿತ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಸಂಖ್ಯೆ: ನಅಇ 268 ಸಿಎಸ್‌ಎಸ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು.

KARNATAKA LEGISLATIVE ASSEMBLY

Starred Question No	:	1691
Name of the Member	:	Sri. G.B Jothy Ganesh
To be replied on	:	19-12-2018
To be replied by	:	Hon'ble Minister for Urban Development.

<table>
<tr><th>Sl</th><th>QUESTION</th><th>ANSWER</th></tr>
<tr><td>a</td><td>How many cities were selected from the Karnataka State under Smart Cities Mission, the ambitious Project of the Central Government. How many meetings of the Smart City Advisory Forum have been conducted under the Chairmanship of the Deputy Commissioner of each cities (Provide copies of proceedings of each meeting)</td><td>Following 7 Cities are selected under the Smart Cities Mission.
1. Belagavi, 2. Davanagere, 3. Hubballi-Dharawad, 4.Shivamogga, 5. Mangaluru 6. Tumkuru and 7. Bengaluru.

The details of the meetings the Smart City Advisory Forum are as follows:
<table><tr><th>Sl .No</th><th>City</th><th>No. of Meetings</th></tr><tr><td>1</td><td>Belagavi</td><td>2</td></tr><tr><td>2</td><td>Davanagere</td><td>1</td></tr><tr><td>3</td><td>Hubballi-Dharawad</td><td>5</td></tr><tr><td>4</td><td>Mangaluru</td><td>4</td></tr><tr><td>5</td><td>Shivamogga</td><td>1</td></tr><tr><td>6</td><td>Tumkuru</td><td>1</td></tr><tr><td>7</td><td>Bengaluru</td><td>0</td></tr></table>The proceedings of these meetings are given in Annexure-1.</td></tr>
<tr><td>b</td><td>Whether all the projects undertaken by the Smart City Company were discussed in the Smart City Advisory Forum meetings? For how many days once, a meeting has to be conducted? Whether local Elected Representatives have been invited for these meetings?</td><td>All the projects undertaken by the Smart City Company were discussed in the Smart City Advisory Forum meetings.

The time-line for conducting the Smart City Advisory Forum meetings has not been specified in the Smart Cities Mission guidelines.

The local Elected Representatives have been invited to these meetings. Details are given in Annexure -1.</td></tr>
<tr><td>c</td><td>In what all the cities and how many times, the Smart City Review & Implementation Committee meetings have been conducted (provide copies of meeting proceedings).</td><td>Details of the Smart City Review & Implementation Committee meetings held under the Chairmanship of the Hon'ble Minister for Urban Development are as follows:
<table><tr><th>Sl No</th><th>City</th><th>No. of Meeting</th></tr><tr><td>1</td><td>Belagavi</td><td>1</td></tr><tr><td>2</td><td>Davanagere</td><td>1</td></tr><tr><td>3</td><td>Hubballi-Dharawad</td><td>2</td></tr><tr><td>4</td><td>Mangaluru</td><td>1</td></tr><tr><td>5</td><td>Shivamogga</td><td>2</td></tr><tr><td>6</td><td>Tumkuru</td><td>1</td></tr><tr><td>7</td><td>Bengaluru</td><td>0</td></tr></table>The proceedings of these meetings are given in Annexrue-2.</td></tr>
</table>

d	Whether the Elected Representatives of the concerned Cities have been invited for the meeting to review the progress of all the projects undertaken by the Smart City Company (provide city-wise and project-wise details).	The Elected Representatives have been invited to the meeting to review the progress of all the projects undertaken by the SPV's. Details are given in Annexure-2.

No: UDD 268 CSS 2018

Sd/-
(U.T.Khader)
Hon'ble Minister for
Urban Development

BSCL/CS-18/Advisory Forum/2017-18/313

Minutes of Meeting

Agenda Of meeting: Advisory forum meeting for progress review of projects under development by Belagavi Smart City Ltd.

Venue: Meeting Hall of Deputy Commissioner Office, Belagavi **Date:** 15-Sept-2017

Attendees

Sl.No.	Name	Designation
1	Sri. S Ziyaullah, IAS, Hon'ble Deputy Commissioner	Chairman
2	Sri.Sanjay Bandekar, Hon'ble Mayor,CCB,Belagavi	Member
3	Sri.Suresh Angadi, , Hon'ble Member of Parliament	Member
4	Sri.Feroz Sait, Hon'ble MLA North Belagavi	Member
5	Sri Sanjay Patil Hon'ble MLA Rural Belagavi	Member
6	Sri S.Y.Kundaragi Retd.Suptd Engineer Technical Expert	Member
7	Smt.Sonali Sarnobat Youth Expert	Member
8	Sri Mallikarjun Mudnur Representative of NGO	Member
9	Sri Shashidhar Kurer, KAS, CEO BSCL	MD BSCL, Member Convener
10	Smt Divya Shivaram	CEO Belagavi Cantonment Board
11	Sri Shakil Ahmed,	Commissioner, BUDA
12	Sri M M Swami	Suptd Engineer
13	Sri R S Naik	Executive Engineer
14	Sri M L Gani	Executive Engineer
15	Sri Ramappa Hatti	CFO
16	Sri Kiran Subbaroa	AEE
17	Sri Ashwin	AEE
18	Sri S M Hiremath	Asst Information Officer I&PR
19	Sri Sunil Kumar	PPP Expert I (PMC)
20	Sri A S Bhasin	Procurement Expert (PMC)
21	Sri Alok Bhardhwaj	Transportation Planner (PMC)
22	Smt Hemalata Gupta	Project Coordinator (PMC)
23	Sri Harsha Annigeri	Team Leader I (PMC)
24	Smt Aishwarya Tipnis	Conservation Architect (PMC)
25	Sri Vardhaman Boni	Electrical Engineer (PMC)
26	Sri Sushil Kedar	AE

27	Ms. Sumita Sani	UP
28	Sri Ambrish	IT expert (PMC)
29	Sri P S Shivapur	AE
30	Sri Anup Kanoj	AE
31	Sri Shashwat Shrivastav	Transportation Planner (PMC)
32	Sri R.L.Patil	AE
33	Sri K A Guruprasad	Secretary APMC Belagavi
34	Smt Archana Kulakarni	CS
35	Sri Satish M	AE Cantonment

1. Meeting started with greetings of Hon'ble Elected Representatives. Managing Director of Belagavi Smart City Limited welcomed present members of Advisory Forum, Officials from Belgavi Urban Development Authority, Belagavi Cantonment Board, City Corporation Belagavi, Stake holders, present Journalist along with Project Management Consultancy.
2. Mr A S Bhasin started presentation with budget summary of financial plan as mentioned in Smart City Proposal. Hon'ble MLA (N) enquired about utilization of funds that is INR 400 Cr granted for Smart City by Government of India. Mr. Firoz Sait showed his concern regarding slow progress of work and emphasized to expedite the process.
3. Mr A S Bhasin explained that two request for proposal that are "Appointment of System Integrator for establishment of Command & Control Centre" and "Energy Auditing of Street Lights under Smart City Energy efficiency program" have been called. Additionally two projects that are "Construction of two Smart roads at KPTCL road and Mandoli road" and "Heritage Park - Water Body & Check Dam (Construction of two Check Weirs in Heritage park)" are tendered.
4. Managing Director explained concept of Smart Roads and their importance. Further transportation plan including roads of categories A, B, G and F was explained by Mr Alok Bharadwaj, Transportation Expert.
5. On query raised by Hon'ble Deputy Commissioner regarding two smart demo roads, Managing Director elaborated that core transportation network along with feeder network is identified and design is under way which also includes under ground ducting and other smart features.
6. Hon'ble MLA (N) showed concern about re-routing of traffic during construction of upcoming ROB project beside railway station. He suggested developing alternate route via Congress road.
7. Mr Kundargi, Member of Advisory Forum suggested construction of concrete road over asphalt road due to its longer life span.
8. Hon'ble MP suggested BUDA to converge 50% of required funds for development of RT Nagar with BSCL. MD urged to raise 32 Cr fund from BUDA and BSCL for RT Nagar development.

9. Ms Sonali, Member of Advisory Forum suggested to include centre for disables and under privileged women. MD agreed to accommodate the suggestions in Multi Utility and facility Centre.
10. Mr Angadi suggested to coordinate with Cantonment Board for vacating vegetable market from fort area. Additionally he ensured his cooperation to expedite process of obtaining NOC's from Army and cantonment departments, Income Tax Department in respect to Fort and Moat precinct development.
11. Mr Sait enquired for feasibility of commercial and office space in CBT building. He urged concentration on mobility facility. Further he asked to confirm extent of acceptable proposed commercial activities by KSRTC.
12. Forum appreciated integration of Skywalk with escalators into CBT and suggested to recheck acceptability of proposed subways.
13. Hon'ble MLA (Rural) has put forth the point of beautify entrances to the city from all directions.
14. Mr Sanjay Patil has also proposed plans for vegetable market in city and requested to include same in smart city mission.
15. Hon'ble MLA (N) suggested to develop new and existing local vegetable markets to improve condition of road side vending. This shall help in decongesting Samadevi Galli and Ganpat Galli area. MD agreed to explore options for developing Bhangi passages into hawker's zone.
16. Hon'ble MLA (N) also suggested to take up flyover at Ashoka Circle out of funds available if some projects are not able to implement.
17. Hon'ble MP opined to look into options for having non motorized transportation zone (NMT) in Ganpat galli, Ramdev galli and Khade bazaar. He showed his interest to organize meeting with residents of these areas and find their views on suggested proposal. Mr Alok Bharadwaj, Transport expert Informed about ongoing feasibility study in area to recommend NMT zone.
18. Managing Director concluded the meeting with vote of thanks to invitees.

(Sri. S Ziyaullah) IAS
Deputy Commissioner, Belagavi & Chairman (Advisory Forum)
Belagavi Smart City Limited

ಬೆಳಗಾವಿ ಸ್ಮಾರ್ಟ್ ಸಿಟಿ ಯೋಜನೆಯ ಸಲಹಾ ಸಮಿತಿ ಸಭೆ ದಿನಾಂಕ: 25-08-2018

ನಡವಳಿಗಳು

ಸ್ಥಳ: ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣ — ಸಮಯ: ಬೆಳಿಗ್ಗೆ 11.00 ಘಂಟೆ.

ಸಭೆಗೆ ಹಾಜರಿದ್ದ ಸದಸ್ಯರು:

1) ಶ್ರೀ. ಎಸ್. ಜಿಯಾವುಲ್ಲಾ ಐ.ಎ.ಎಸ್. ಜಿಲ್ಲಾಧಿಕಾರಿಗಳು ಬೆಳಗಾವಿ – ಅಧ್ಯಕ್ಷರು ಬೆಳಗಾವಿ ಸ್ಮಾರ್ಟ್ ಸಿಟಿ ಸಲಹಾ ಸಮಿತಿ
2) ಶ್ರೀ. ಸುರೇಶ ಅಂಗಡಿ, ಮಾನ್ಯ ಸಂಸದರು, ಬೆಳಗಾವಿ – ಸದಸ್ಯರು
3) ಶ್ರೀ. ಸತೀಶ ಜಾರಕಿಹೊಳಿ, ಮಾನ್ಯ ಶಾಸಕರು (ಯಮಕನಮರಡಿ) ಕ್ಷೇತ್ರ – ಸದಸ್ಯರು
4) ಶ್ರೀ. ಅಭಯ ಪಾಟೀಲ, ಮಾನ್ಯ ಶಾಸಕರು ಬೆಳಗಾವಿ (ದಕ್ಷಿಣ) ಕ್ಷೇತ್ರ – ಸದಸ್ಯರು
5) ಶ್ರೀ. ಅನಿಲ ಬೆನಕೆ, ಮಾನ್ಯ ಶಾಸಕರು ಬೆಳಗಾವಿ (ಉತ್ತರ) ಕ್ಷೇತ್ರ – ಸದಸ್ಯರು
6) ಶ್ರೀಮತಿ. ಲಕ್ಷ್ಮೀ ಹೆಬ್ಬಾಳಕರ, ಮಾನ್ಯ ಶಾಸಕರು ಬೆಳಗಾವಿ (ಗ್ರಾಮೀಣ) ಕ್ಷೇತ್ರ – ಸದಸ್ಯರು
7) ಶ್ರೀ. ಬಸಪ್ಪಾ ಚಿಕ್ಕಲದಿನ್ನಿ, ಪೂಜ್ಯ ಮಹಾಪೌರರು ಮಹಾನಗರ ಪಾಲಿಕೆ, ಬೆಳಗಾವಿ. – ಸದಸ್ಯರು
8) ಶ್ರೀ. ಶಶಿಧರ ಕುರೇರ. ಕೆ.ಎ.ಎಸ್. ವ್ಯವಸ್ಥಾಪಕ ನಿರ್ದೇಶಕರು ಬೆಸ್ಕಾಸಿಲಿ ಹಾಗೂ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ – ಸಂಚಾಲಕ ಸದಸ್ಯರು
9) ಶ್ರೀ.ಎಸ್. ವಾಯ್. ಕುಂದರಗಿ, ತಾಂತ್ರಿಕ ನಿಪುಣರು – ಸದಸ್ಯರು
10) ಶ್ರೀ.ಮಲ್ಲಿಕಾರ್ಜುನ ಮುದನೂರ, ಅರೆ ಸರ್ಕಾರಿ ಸಂಸ್ಥೆ ನಿಪುಣರು – ಸದಸ್ಯರು

ಸಭೆ ಗೈರು ಹಾಜರಾತಿ

1) ಶ್ರೀಮತಿ ಸೋನಾಲಿ ಸರನೋಬತ, ಯುವ ನಿಪುಣರು – ಸದಸ್ಯರು

ಸಭೆಗೆ ಹಾಜರಿದ್ದ ಅಧಿಕಾರಿಗಳು

1) ಶ್ರೀ. ಕೆ.ಎಫ್ ಹುಲಕುಂದ. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಬೆಸ್ಕಾಸಿಲಿ
2) ಶ್ರೀ. ರಮೇಶ ಸ್ವಾಮಗೌಡರ ಕಾರ್ಯಕಾರಿ ಅಭಿಯಂತರರು ಬೆಸ್ಕಾಸಿಲಿ.
3) ಶ್ರೀ.ಎ.ಎಸ್ ಭಾಸಿನ್ ಹಿರಿಯ ಪ್ರಧಾನ ವ್ಯವಸ್ಥಾಪಕರು, ಪಿ.ಎಮ್.ಸಿ
4) ಶ್ರೀ. ವಿವೇಕ ಪಾಲಿಯಾ, ಟೀಮ್ ಲೀಡರ್, ಪಿಎಮ್‌ಸಿ
5) ಶ್ರೀ. ಎಸ್. ಅಮರ ಗುಂಡಪ್ಪ, Dy CE/CN/ರೇಲ್ವೆ ಇಲಾಖೆ/ಹುಬ್ಬಳ್ಳಿ
6) ಶ್ರೀ. ಕೆ ಆರ್ ಶೆಟ್ಟಿ AXEN/CN/ರೇಲ್ವೆ ಇಲಾಖೆ /ಹುಬ್ಬಳ್ಳಿ

ನಡಾವಳಿಗಳು

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಬೆಳಗಾವಿರವರು ಸಭೆಗೆ ಆಗಮಿಸಿದ ಎಲ್ಲ ಮಾನ್ಯ ಸದಸ್ಯರುಗಳಿಗೆ ಸ್ವಾಗತಕೋರಿ ಸಭೆಯನ್ನು ನಡೆಸಿಕೊಡಲು ಮಾನ್ಯ ಜಿಲ್ಲಾಧಿಕಾರಿಗಳು. ಹಾಗೂ ಅಧ್ಯಕ್ಷರು. ಸಲಹಾ ಸಮಿತಿಯವರನ್ನು ವಿನಂತಿಸಿದರು.

ಮಾನ್ಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ರವರಿಗೆ ಸ್ಮಾರ್ಟ್ ಸಿಟಿ ಯೋಜನೆಯ ಕುರಿತು ಪವರ್ ಪಾಯಿಂಟ ಪ್ರೆಸೆಂಟೇಶನ್ (ಪಿಪಿಟಿ) ಮಂಡಿಸಲು ತಿಳಿಸಿದರು.

ಅದರಂತೆ ವ್ಯವಸ್ಥಾಪಕ ನಿರ್ದೇಶಕರು ಯೋಜನೆಯ ಕುರಿತು ಸಮಗ್ರ ಮಾಹಿತಿಯನ್ನು ಹಾಗೂ ಪ್ರಗತಿಯ ವಿವರಗಳನ್ನು ಪವರ್ ಪಾಯಿಂಟ ಪ್ರೆಸೆಂಟೇಶನ್ (ಪಿಪಿಟಿ) ಮೂಲಕ ಸಭೆಗೆ ಮಂಡಿಸಿದರು.

ಬೆಳಗಾವಿ ಕೋಟೆ ಹಾಗೂ ಕಂದಕದ ಅಭಿವೃದ್ಧಿ ಯೋಜನೆ (Fort & Moat Development Project)

ಈ ಯೋಜನೆಯ ಕುರಿತು ಚರ್ಚಿಸುತ್ತ ಶ್ರೀ. ಸುರೇಶ ಅಂಗಡಿ, ಮಾನ್ಯ ಸಂಸದರು, ಬೆಳಗಾವಿ ಕೋಟೆ ಹಾಗೂ ಕಂದಕದ ಅಭಿವೃದ್ಧಿ ಯೋಜನೆ (Fort & Moat) ಮತ್ತು ಇತರೆ ಕೆಲವು ಪ್ರಸ್ತಾಪಿತ ಕಾಮಗಾರಿಗಳು ರಕ್ಷಣಾ ಇಲಾಖೆಗೆ ಸೇರಿದ ಜಾಗೆಯಲ್ಲಿ ಬರುತ್ತಿದ್ದು, ಈ ಕುರಿತು ರಕ್ಷಣಾ ಅಧಿಕಾರಿಗಳ ಜೊತೆ ಈಗಾಗಲೇ ಚರ್ಚಿಸಿದಂತೆ ಸದರಿ ಯೋಜನೆಗಳ ಅನುಷ್ಠಾನಕ್ಕೆ ನಿರಪೇಕ್ಷಣಾ ಪ್ರಮಾಣ ಪತ್ರ (NOC) ಪಡೆಯಲು ವಿವರವಾದ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಗೆ ಸಲ್ಲಿಸಿದಲ್ಲಿ ಈ ಕುರಿತು ಅವರೊಂದಿಗೆ ಚರ್ಚಿಸಿ ನಿರಪೇಕ್ಷಣಾ ಪ್ರಮಾಣ ಪತ್ರ (NOC) ಪಡೆಯಲು ಪ್ರಯತ್ನಿಸುವದಾಗಿ ತಿಳಿಸಿದರು.

ಕೈಗೆಟುಕುವ ದರದಲ್ಲಿ ಬಡವರಿಗೆ ವಸತಿ ನಿರ್ಮಾಣ (Affordable Housing)

ಸ್ಮಾರ್ಟ ಸಿಟಿ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಕೈಗೆಟುಕುವ ದರದಲ್ಲಿ ಬಡವರಿಗೆ ವಸತಿ ನಿರ್ಮಾಣ (Affordable Housing) ಯೋಜನೆಗೆಗಾಗಿ ರೂ. 7.00 ಕೋಟಿ ಅನುದಾನವನ್ನು ಮೀಸಲಿಟ್ಟಿರುವದಾಗಿ ತಿಳಿಸಿ, ಈ ಹಣವನ್ನು ಮಹಾನಗರ ಪಾಲಿಕೆ ಬೆಳಗಾವಿ ಯಡಿಯಲ್ಲಿ ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ, ಅಂಬೇಡ್ಕರ್ ಹಾಗೂ ವಾಜಪೇಯಿ ವಸತಿ ಯೋಜನೆ ಕೈಗೊಳ್ಳಲಾಗುತ್ತಿರುವ ವಸತಿ ನಿರ್ಮಾಣ ಯೋಜನೆಗೆ ಸ್ಮಾರ್ಟ ಸಿಟಿ ಯೋಜನೆಯಲ್ಲಿ ಮೀಸಲಿರುವ ಹಣವನ್ನು ವರ್ಗಾಯಿಸುವ ಕುರಿತು ಸಭೆಯ ಸಲಹೆ ಕೋರಿದರು.

ಈ ಬಗ್ಗೆ ಮಾನ್ಯ ಸಂಸದರು ಹಾಗೂ ಮಾನ್ಯ ಅಧ್ಯಕ್ಷರು ಈ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರದ ಹಾಗೂ ಸ್ಮಾಟ್ ಸಿಟಿ ಮಂಡಳಿಯ (SPV) ಅನುಮೋದನೆಗಾಗಿ ಸಲ್ಲಿಸಲು ಶೀಘ್ರವಾಗಿ ಕ್ರಮಕೈಕೊಳ್ಳಲು ಸೂಚಿಸಿದರು.

ಏರಿಯಾ ಬೇಸ್ಡ್ ಡೆವಲಪ್‌ಮೆಂಟ (ABD) ಪ್ರದೇಶ ಅಭಿವೃದ್ಧಿ ಪಡಿಸುವ ಕುರಿತು.

ಶ್ರೀ. ಅಭಯ ಪಾಟೀಲ, ಮಾನ್ಯ ಶಾಸಕರು (ದಕ್ಷಿಣ) ರವರು ಈ ಬಗ್ಗೆ ಚರ್ಚಿಸುತ್ತ, ಬೆಳಗಾವಿ (ದಕ್ಷಿಣ) ಕ್ಷೇತ್ರದಲ್ಲಿ ABD ಏರಿಯಾ ವಿಸ್ತೀರ್ಣವು ತುಂಬಾ ಕಡಿಮೆಯಾಗಿರುವ ಬಗ್ಗೆ ಸಭೆಯ ಗಮನ ಸೆಳೆದರು ಹಾಗೂ ಬೆಳಗಾವಿ ದಕ್ಷಿಣ ಕ್ಷೇತ್ರದಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಗುರುತಿಸಿ ಅಭಿವೃದ್ಧಿಗೆ ಒತ್ತು ನೀಡಲು ಕೋರಿದರು,

ಈ ಕುರಿತು ಚರ್ಚೆ ನಡೆದು ಸದರಿ ಪ್ರಸ್ತಾವನೆಯನ್ನು Advisory Forum ಸಲಹೆಯಂತೆ ವಿಶೇಷ ಉದ್ದೇಶದ ವಾಹನ ಮಂಡಳಿ (SPV Board) ಮುಂದೆ ಮಂಡಿಸಿ ಕ್ರಮಜರುಗಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು.

ABD ಪ್ರದೇಶಕ್ಕೆ ಹೊಂದಿಕೊಂಡಿರುವ ಮತ್ತು ಶಿವಾಜಿ ಉದ್ಯಾನದ ಪಕ್ಕದ ಬ್ಯಾಂಕ್ ಆಫ್ ಇಂಡಿಯಾ ವೃತ್ತದಿಂದ ನೇರವಾಗಿ ಹಳೇ ಪೂನಾ ಬೆಂಗಳೂರು ರಸ್ತೆ ಸೇರುವ 80 ಅಡಿ ಅಗಲ ರಸ್ತೆಯ ಹಾಗೂ ನಾಥಪೈ ವೃತ್ತದಿಂದ ವಡಗಾಂವ್ ಮೂಲಕ ಆರ್.ಪಿ.ಡಿ ಕ್ರಾಸ್ ಸೇರುವ ರಸ್ತೆಯ ಅಭಿವೃದಿಯನ್ನು ಬೆಳಗಾವಿ ಸ್ಮಾರ್ಟ ಸಿಟಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲು ಸೂಚಿಸಿದರು.

ಶ್ರೀಮತಿ. ಲಕ್ಷ್ಮೀ ಹೆಬ್ಬಾಳಕರ, ಮಾನ್ಯ ಶಾಸಕರು (ಗ್ರಾಮೀಣ) ರವರು ಇವು ಕ್ಷೇತ್ರದಲ್ಲಿ ಸಹ PAN ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿದರು ಹಾಗೂ ಸ್ಮಾರ್ಟ್ ರಸ್ತೆಯಿಂದ ಓ.ಜಿ.ವಿಭಾಗ ರಸ್ತೆ (via ಕಲಮೇಶ್ವರ ಕಾಲನಿ, ಶಾಹೂನಗರ, ರಂಗ್ರಾಳಿ ಪಿ.ಕೆ. ರಾಮನಗರ, ಮಾರ್ಕಂಡೇಯ ನಗರ). ರಸ್ತೆಯ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲು ಸಲಹೆ ನೀಡಿದರು.

<u>ಕಲಾಮಂದಿರ ಬಹು ಉಪಯೋಗಿ ವಾಣಿಜ್ಯ ಸಂಕೀರ್ಣ (Kalamandir City Center)</u>

ಸದರಿ ಯೋಜನೆಯ ಕುರಿತು ಶ್ರೀ. ಅಭಯ ಪಾಟೀಲ, ಮಾನ್ಯ ಶಾಸಕರು (ದಕ್ಷಿಣ) ರವರು ಕಲಾಮಂದಿರ ಯೋಜನೆಯ ಕಟ್ಟಡದ 2ನೇಯ ಮಹಡಿಯಲ್ಲಿ ಅಳವಡಿಸಲಾದ ಸಭಾ ಭವನವನ್ನು ನೆಲ ಮಹಡಿಯಲ್ಲಿ ಅಳವಡಿಸಲು ಸಲಹೆ ನೀಡಿದರು. ಮಾನ್ಯ ಅಧ್ಯಕ್ಷರು ಈ ಕುರಿತು ತಾಂತ್ರಿಕವಾಗಿ ಪರಿಶೀಲಿಸಿ ಕ್ರಮ ಜರುಗಿಸಲು ತಿಳಿಸಿದರು.

<u>ಕುಡಿಯುವ ನೀರಿನ ಘಟಕ (Drinking Water Kiosk)</u>

ಈ ಯೋಜನೆಯ ಕುರಿತು ಚರ್ಚಿಸಿ, ಸದರಿ ಯೋಜನೆಗೆ ಮೀಸಲಿರಿಸಿದ ರೂ. 9.00 ಕೋಟಿ ಹಣದ ಪೈಕಿ ರೂ. 1.00 ಕೋಟಿ ಹಣವನ್ನು ಈ ಯೋಜನೆಗೆ ಅವಶ್ಯಕತೆಗೆ ಅನುಗುಣವಾಗಿ ಉಪಯೋಗಿಸಲು ತಿಳಿಸಲಾಯಿತು. ಮತ್ತು ಬಾಕಿ ಉಳಿದ ರೂ. 8.00 ಕೋಟಿ ಹಣವನ್ನು ಬೇರೆ ಯೋಜನೆಗೆ ಉಪಯೋಗಿಸಲು ಪ್ರಸ್ತಾವನೆಯನ್ನು ವಿಶೇಷ ಉದ್ದೇಶಿತ ವಾಹನ ಮಂಡಳಿ (SPV Board) ಅನುಮೋದನೆಗಾಗಿ ಸಲ್ಲಿಸಲು ಸಲಹೆ ನೀಡಿದರು.

<u>ಪ್ರವಾಸಿ ಮಾರ್ಗದರ್ಶಿ ಕೇಂದ್ರ (Tourist Guidance Center)</u>

ಮಾನ್ಯ ಅಧ್ಯಕ್ಷರು, ಸದರಿ ಯೋಜನೆಯನ್ನು ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹಾಗೂ ನಿರ್ವಹಣೆಯ ದೃಷ್ಟಿಯಿಂದ ರೇಲ್ವೆ ಸ್ಟೇಶನ ಹಾಗೂ ಬಸ್ ಸ್ಟಾಂಡ್‌ಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಿದರು ಮತ್ತು ಈ ರೀತಿ ಮಾಡುವುದರಿಂದ ಸದರಿ ಕೇಂದ್ರಗಳ ನಿರ್ವಹಣೆಯು ಸುಲಭ ವಾಗುವದೆಂದು ಮಾನ್ಯ ಅಧ್ಯಕ್ಷರು ಸಲಹೆ ನೀಡಿದರು.

<u>ಸೈಕಲ್ ಟ್ರ್ಯಾಕ್ (Cycle Track)</u>

ಶ್ರೀ. ಅಭಯ ಪಾಟೀಲ, ಮಾನ್ಯ ಶಾಸಕರು (ದಕ್ಷಿಣ) ಮತ್ತು ಶ್ರೀ. ಅನಿಲ ಬೆನಕೆ, ಮಾನ್ಯ ಶಾಸಕರು (ಉತ್ತರ) ಸದರಿ ಯೋಜನೆಯನ್ನು ಬೇರೆ ನಗರಗಳಲ್ಲಿ ಅನುಷ್ಠನಗೊಳಿಸಲಾಗಿದ್ದು ಅದು ಉದ್ದೇಶಿತ ಮಟ್ಟಿಗೆ ಸಫಲವಾಗಿರುವದಿಲ್ಲವೆಂದು ತಿಳಿಸುತ್ತಾ, ಈ ಕುರಿತು ಹೆಚ್ಚಿನ ಅಧ್ಯಯನ ಕೈಕೊಂಡು ಅವಶ್ಯಕತೆ ಇದ್ದಲ್ಲಿ ಮಾತ್ರ ಅನುಷ್ಠಾನಗೊಳಿಸಲು ತಿಳಿಸಿದರು ಲಭ್ಯವಿರುವ ಅನುದಾನವನ್ನು ಬೇರೆ ಅಗತ್ಯವಿರುವ ಯೋಜನೆಗಳಿಗೆ ಮೀಸಲಿಡಲು ಸಲಹೆ ನೀಡಿದರು.

<u>ಟ್ರಾಮಾ ಸೆಂಟರ (Trauma Centre)</u>

ಸದರಿ ಯೋಜನೆಯ ಕುರಿತು ಚರ್ಚಿಸುತ್ತಾ ಮಾನ್ಯ ಅಧ್ಯಕ್ಷರು ಈ ಯೋಜನೆಯನ್ನು ನಗರದ ಬೇರೆ ಸ್ಥಳಗಳಲ್ಲಿ ಅನುಷ್ಠಾನಗೊಳಿಸದೆ. ಬೆಳಗಾವಿ ವೈದ್ಯಕೀಯ ಮಹಾವಿದ್ಯಾಲಯ (BIMS) ಆವರಣದಲ್ಲಿರುವ ಹಾಲಿ Trauma Centre ಗೆ ಹೆಚ್ಚಿನ ವೈದ್ಯಕೀಯ ಸಲಕರಣೆ ಒದಗಿಸಿ ಉನ್ನತೀಕರಿಸಲು ಸೂಚಿಸಿದರು. ಸದರಿ ಸಲಹೆಗೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

<u>ಪ್ರಾಥಮಿಕ ಆರೋಗ್ಯ ಕೇಂದ್ರದ ಉನ್ನತ್ತೀಕರಣ (Upgradation of Primary Health Center)</u>

ಸದರಿ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಮೊಹಲ್ಲಾ ಕ್ಲಿನಿಕ್ (Mohalla Clinic) ಕಾರ್ಯನಿರ್ವಹಿಸಲು ಅವಶ್ಯವಿರುವ ವೈದ್ಯಕೀಯ ಸಿಬ್ಬಂದಿಯನ್ನು ಒದಗಿಸುವ ಕುರಿತು ಆರೋಗ್ಯ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು ಬೆಳಗಾವಿ ರವರೊಂದಿಗೆ ಚರ್ಚಿಸಿ ಯೋಜನೆಯನ್ನು ರೂಪಿಸಲು ಮಾನ್ಯ ಅಧ್ಯಕ್ಷರು ಸಲಹೆ ನೀಡಿದರು.

ಮೋಟರರಹಿತ ವಾಹನ ಸಂಚಾರ ಹಾಗೂ ಬೀದಿ ವ್ಯಾಪಾರ ಪ್ರದೇಶ ಅಭಿವೃದ್ಧಿ (NMV & Hawaker Zones)

ಮಾನ್ಯ ಸಂಸದರು ಬೆಳಗಾವಿ ಇವರು ಈ ಯೋಜನೆಯ ಕುರಿತು ಚರ್ಚಿಸುತ್ತಾ ಬೆಳಗಾವಿ ನಗರದ ಖಡೇ ಬಜಾರ, ರಾಮದೇವಗಲ್ಲಿ, ಗಣಪತಗಲ್ಲಿ, ಮತ್ತು ಮಾರುತಿ ಗಲ್ಲಿಗಳಲ್ಲಿ ಮೋಟರರಹಿತ ವಾಹನ ಸಂಚಾರ ಹಾಗೂ ಬೀದಿ ವ್ಯಾಪಾರ ಪ್ರದೇಶವಾಗಿ ಅಭಿವೃದ್ಧಿ ಪಡಿಸಿ ಬೀದಿ ವ್ಯಾಪಾರಿಗಳಿಗೆ ತಡರಾತ್ರಿವರೆಗೆ ವ್ಯಾಪಾರ ನಡೆಸಲು ಅನುವು ಮಾಡಿಕೊಡಲು ಸಲಹೆ ನೀಡಿದರು ಮತ್ತು ಇತರ ಸದಸ್ಯರು ಈ ಸಲಹೆಗೆ ಸಹಮತ ವ್ಯಕ್ತಪಡಿಸಿದರು.

ಆದ್ಯತೆಯುಳ್ಳ ಬಸ್ ಮಾರ್ಗ (Priority Bus Lanes)

ಮಾನ್ಯ ಅಧ್ಯಕ್ಷರು ಈ ಯೋಜನೆಯ ಕುರಿತು ಚರ್ಚಿಸುತ್ತಾ, ಸದರಿ ಯೋಜನೆಯ ಅನುಷ್ಠಾನಕ್ಕೆ ಅಗಲವಾದ ರಸ್ತೆಗಳ ಅವಶ್ಯಕತೆಯಿದ್ದು ಈ ಯೋಜನೆಯನ್ನು ಅಗಲವಾದ ರಸ್ತೆಗಳಲ್ಲಿ ಮಾತ್ರ ಯೋಜಿಸಿ ಇತರೆ ವಾಹನಗಳ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗದಂತೆ ಅನುಷ್ಠಾನಗೊಳಿಸಲು ಸಲಹೆ ನೀಡಿದರು.

ಮಿಡಿ ಬಸ್‌ಗಳಿಗೆ ರಿಟ್ರೊಫಿಟ್ಟಿಂಗ್ (Retrofitting Midi Buses)

ಈ ಯೋಜನೆ ಅನುಷ್ಠಾನಗೊಳಿಸುವ ಪೂರ್ವದಲ್ಲಿ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳೊಂದಿಗೆ ಯೋಜನೆಯ ನಿರ್ವಹಣೆಯ ಕುರಿತು ಚರ್ಚಿಸಿ, ಯೋಜನೆಯಲ್ಲಿ ಉದ್ದೇಶಿಸಿರುವ GPRS ಹಾಗೂ ಇತರ ಇಲೆಕ್ಟ್ರಾನಿಕ್ ಉಪಕರಣಗಳ ನಿರ್ವಹಣೆ ಬಗ್ಗೆ ಕರಾರು ಒಪ್ಪಂದ ಮಾಡಿಕೊಂಡು ಯೋಜನೆ ಅನುಷ್ಠಾನಗೊಳಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

ಐಸಿಟಿ ಯೋಜನೆ (ICT Project)

ಶ್ರೀ. ಸುರೇಶ ಅಂಗಡಿ, ಮಾನ್ಯ ಸಂಸದರು ಹಾಗೂ ಶ್ರೀ. ಸತೀಶ ಜಾರಕಿಹೊಳಿ, ಮಾನ್ಯ ಶಾಸಕರು (ಯಮಕನಮರಡಿ) ಈ ಯೋಜನೆ ಅನುಷ್ಠಾನಗೊಳಿಸುವ ಪೂರ್ವದಲ್ಲಿ ಸಂಬಂದಪಟ್ಟ ಇಲಾಖೆಗಳಾದ ಪೋಲೀಸ್ ಇಲಾಖೆ, ಬಿ.ಎಸ್.ಎನ್.ಎಲ್, ಕೆ.ಡಬ್ಲ್ಯೂ.ಎಸ್.ಡಿ.ಬಿ, ಕೆ.ಎಸ್.ಆರ್.ಟಿ.ಸಿ. ಹಾಗೂ ಹೆಸ್ಕಾಂ ರವರೂಂದಿಗೆ ಚರ್ಚಿಸಿ ಈ ಯೋಜನೆಯು ಯಶಸ್ವಿಯಾಗಿ ಅನುಷ್ಠಾನಗೊಳ್ಳುವ ಕುರಿತು ಕ್ರಮ ಕೈಗೊಳ್ಳಲು ಸಲಹೆ ನೀಡಿದರು.

ಖಾಸಗಿ ಸಹಭಾಗಿತ್ವಯೋಜನೆ (Public Private Partnership)

ಈ ಯೋಜನೆಗಾಗಿ ಈಗಾಗಲೇ ಗುರುತಿಸಲಾದ ಜಾಗೆಗಳು ಅಲಭ್ಯವಿದ್ದ ಕಾರಣ ಮಾನ್ಯ ಅಧ್ಯಕ್ಷರು ಬೇರೆ ಲಭ್ಯವಿರುವ ಜಾಗೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲು ಸಲಹೆ ನೀಡಿದರು. ಮಾನ್ಯ ಸಂಸದರು, ಬೆಳಗಾವಿ ಹಾಗೂ ಶ್ರೀ. ಸತೀಶ ಜಾರಕಿಹೊಳಿ, ಮಾನ್ಯ ಶಾಸಕರು (ಯಮಕನಮರಡಿ) ಇವರು ಪಿ.ಎಮ್.ಸಿ ಇವರಿಗೆ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುವಂತೆ ಸೂಕ್ತ ಮಾರುಕಟ್ಟೆ ಅಧ್ಯಯನ ಕೈಕೊಂಡು ವರದಿ ತಯಾರಿಸಲು ಸೂಚಿಸಿದರು.

ಇತರ ಯೋಜನೆಗಳು

ಬೆಳಗಾವಿ ಸ್ಮಾರ್ಟ ಸಿಟಿ ಅಡಿಯಲ್ಲಿರುವ ಯೋಜನೆಗಳಾದ ಕುಡಿಯುವ ನೀರಿನ ಘಟಕ (Water Kiosk), ಪಾದಚಾರಿ ಮಾರ್ಗ ಮತ್ತು ಸೈಕಲ್‌ಟ್ರಾಕ್ (Footpath & Cycle Track), ಆದ್ಯತೆಯುಳ್ಳ ಬಸ್ ಮಾರ್ಗ (Priority Bus Lanes), ಬಸ್ ತಂಗುದಾಣ ಮತ್ತು ಬಹು ಉಪಯೋಗ ವಾಣಿಜ್ಯ ಸಂಕೀರ್ಣ (Bus Terminal With MUFC), Intelligent Traffic Management ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗದೆ ಇರುವದರಿಂದ ಈ ಯೋಜನೆಗಳಿಗೆ ನಿಗದಿ ಪಡಿಸಿದ ಮೊತ್ತದಲ್ಲಿ ಉಳಿತಾಯವಾಗುವ ಮೊತ್ತವನ್ನು PAN CITY ಏರಿಯಾದಲ್ಲಿ ಅತೀ ಅವಶ್ಯವಿರುವ ರಸ್ತೆ, ಚರಂಡಿ ಹಾಗೂ ಇತರೆ ಕಾಮಗಾರಿಗಳಿಗೆ ಉಪಯೋಗಿಸಲು ವಿಶೇಷ ಉದ್ದೇಶಿತ ವಾಹನ ಮಂಡಳಿ (SPV Board) ಸಭೆಯಲ್ಲಿ ಪ್ರಸ್ತಾವನ

ನಡೆಸಲು ಸರ್ಕಾರದ ಮಟ್ಟದಿಂದ ತೀರ್ಮಾನಿಸಿ ಮಾನ್ಯ ಅಧ್ಯಕ್ಷರು ಈ ಕುರಿತು ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಿದರು.

ಶ್ರೀ. ಅಭಯ ಪಾಟೀಲ, ಮಾನ್ಯ ಶಾಸಕರು (ದಕ್ಷಿಣ) ರವರು ಸ್ಮಾರ್ಟ ಸಿಟಿ ಮಂಡಳಿ SPV Board) ನಲ್ಲಿ ಸ್ಥಳೀಯ ಶಾಸಕರನ್ನು ನಿರ್ದೇಶಕರಾಗಿ ನೇಮಿಸುವ ಬಗ್ಗೆ ಪರಿಶೀಲಿಸಲು ಸಲಹೆ ನೀಡಿದರು.

ಮಾನ್ಯ ಅಧ್ಯಕ್ಷರು ಸ್ಮಾರ್ಟ ಸಿಟಿ ಪ್ರಗತಿಯನ್ನು ತ್ವರಿತಗೊಳಿಸಲು ಮತ್ತು ಸಲಹಾ ಸಮಿತಿ ಸಭೆಯನ್ನು ಕನಿಷ್ಠ ಎರಡು ತಿಂಗಳಿಗೊಮ್ಮೆ ನಡೆಸಲು ಸೂಚಿಸಿದರು.

ಕೊನೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಲಹಾ ಸಮಿತಿಗೆ ಆಗಮಿಸಿದ ಮಾನ್ಯ ಅಧ್ಯಕ್ಷರು, ಮಾನ್ಯ ಸಂಸದರು, ಮಾನ್ಯ ಶಾಸಕರು, ಇತರೆ ಸದಸ್ಯರು ಹಾಗೂ ಹಾಜರಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿ ಹಾಗೂ ಮಾಧ್ಯಮದವರಿಗೆ ವಂದನೆ ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

(ಶ್ರೀ. ಎಸ್ ಜಿಯಾವುಲ್ಲಾ) ಐ.ಎ.ಎಸ್
ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು (ಸಲಹಾ ಸಮಿತಿ)
ಬೆಳಗಾವಿ ಸ್ಮಾರ್ಟ ಸಿಟಿ ಲಿಮಿಟೆಡ್

ದಿನಾಂಕ:03.10.2018ರಂದು ಮಾನ್ಯ ಜಿಲ್ಲಾದಿಕಾರಿಗಳು,ಶಿವಮೊಗ್ಗ ಜಿಲ್ಲೆ,ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ ನಡೆದ ಮೊದಲನೇ CITY ADVISORY FORUM MEETING ನ ನಡುವಳಿಗಳು

ಹಾಜರಿದ್ದವರು:

1. ಶ್ರೀ.ಕೆ.ಎಸ್.ಈಶ್ವರಪ್ಪ,ಶಾಸಕರು,ವಿಧಾನಸಭಾ ಕ್ಷೇತ್ರ,ಶಿವಮೊಗ್ಗ ನಗರ
2. ಶ್ರಿ.ಕೆ.ಬಿ ಅಶೋಕ್ ನಾಯ್ಕ್. ಶಾಸಕರು,ವಿಧಾನಸಭಾ ಕ್ಷೇತ್ರ,ಶಿವಮೊಗ್ಗ ಗ್ರಾಮಾಂತರ
3. ಶ್ರಿ.ಆರ್.ಪ್ರಸನ್ನ ಕುಮಾರ್ ಸದಸ್ಯರು,ವಿಧಾನ ಪರಿಷತ್,ಶಿವಮೊಗ್ಗ
4. ಶ್ರೀ.ಆಯನೂರ್ ಮಂಜುನಾಥ್, ಸದಸ್ಯರು,ವಿಧಾನ ಪರಿಷತ್,ಶಿವಮೊಗ್ಗ
5. ಶ್ರೀ.ಚಾರುಲತಾ ಸೋಮಲ್,ವ್ಯವಸ್ಥಾಪಕ ನಿರ್ದೇಶಕರು ,ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಹಾಗೂ ಆಯುಕ್ತರು,ಶಿವಮೊಗ್ಗ ಮಹಾನಗರ ಪಾಲಿಕೆ ,ಶಿವಮೊಗ್ಗ
6. ಶ್ರೀ.ನತೀಶ್ ಕುಮಾರ್ ಶೆಟ್ಟಿ,ಕಾರ್ಯದರ್ಶಿಗಳು,ನಾಗರೀಕ ಹಿತರಕ್ಷಣಾ ವೇದಿಕೆ,ಶಿವಮೊಗ್ಗ
7. ಶ್ರೀಮತಿ ಯಶೋದಾ ಬೋಗೇಶ್ ಕುಮಾರ್,ನಗರ ಮಟ್ಟದ ಒಕ್ಕೂಟ(ಸಿ.ಎಲ್.ಎಫ್.ಫೆಡರೇಷನ್),ಶಿವಮೊಗ್ಗ
8. ಶ್ರೀ.ಹೆಚ್.ಎಂ ಚಿದಾನಂದ, ಮುಖ್ಯ ಅಭಿಯಂತರರು/ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ
9. ಶ್ರೀ. ಅವಿನಾಶ್ ಗುಪ್ತ, ಮುಖ್ಯ ಹಣಕಾಸು ಅಧಿಕಾರಿಗಳು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
10. ಶ್ರೀ.ಡಾ॥ ಹೆಚ್.ಎಂ.ನಟರಾಜ್ ಪ್ರಧಾನ ವ್ಯವಸ್ಥಾಪಕರು(ಆಡಳಿತ), ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
11. ಶ್ರೀ.ಎಸ್.ಗಣೇಶ್, ಕಾರ್ಯಪಾಲಕ ಅಭಿಯಂತರರು ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.

ಸಭೆಯಲ್ಲಿ ಉಪಸ್ಥಿತರಿದ್ದ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಕಾರ್ಯಪಾಲಕ ಅಭಿಯಂತರರು,ಶಿವಮೊಗ್ಗ ಸ್ಮಾರ್ಟ್ ಲಿಮಿಟೆಡ್ ರವರು ಸ್ವಾಗತಿಸಿದರು ಹಾಗು ಸಭೆಯನ್ನು ನಡೆಸಿ ಕೊಡಲು ಸಭಾಧ್ಯಕ್ಷರನ್ನು ಕೋರಲಾಯಿತು.

ಶಿವಮೊಗ್ಗ ಸ್ಮಾರ್ಟ್ ಸಿಟಿಯು ಎರಡನೇ ಸುತ್ತಿನ ಸ್ಪರ್ಧೆಯಲ್ಲಿ ಆಯ್ಕೆಯಾಗಿರುವ ಬಗ್ಗೆ ಎಸ್.ಪಿ.ವಿ ನೊಂದಣಿ,ಹಾಗೂ ಯೋಜನಾ ಸಮಾಲೋಚಕರ ನೇಮಕಾತಿ,ಸ್ಮಾರ್ಟ್ ಸಿಟಿ ಮಂಡಳಿ ರಚನೆ ಹಾಗೂ ನಡೆದಿರುವ ಮಂಡಳಿ ಸಭೆಗಳ ಮಾಹಿತಿ, statutory auditor ನೇಮಕಾತಿ Implementation and review committee ರಚನೆ ಹಾಗೂ ನಡೆದ ಸಭೆಗಳ ವಿವರ, ವಿವಿಧ ಇಲಾಖೆಗಳೊಂದಿಗೆ ನಡೆಸಿದ ಸಮಾಲೋಚನ ಸಭೆಗಳ ವಿವರ,ಸ್ಮಾರ್ಟ್ ಸಿಟಿ ಕುರಿತಂತೆ ನಡೆದಿರುವ ಪಾಲಿಕೆ ಕೌನ್ಸಿಲ್ ಸಭೆಗಳ ಬಗ್ಗೆ ಮಾಹಿತಿಯನ್ನು ಸಭೆಗೆ ಸಲ್ಲಿಸಲಾಯಿತು.

ಸಭೆಯಲ್ಲಿ ಮಾನ್ಯ ಶಾಸಕರಾದ ಶ್ರೀ.ಆಯನೂರು ಮಂಜುನಾಥ್ ರವರು ಸ್ಮಾರ್ಟ್ ಸಿಟಿ ಪ್ರಾರಂಭವಾದ ಬಹಳ ದಿನಗಳ ನಂತರ ಸಲಹಾ ಸಮಿತಿ ರಚಿಸಿರುವುದರ ಕುರಿತು ಹಾಗೂ ತಡವಾಗಿ ಸಭೆಯನ್ನು ಕರೆದಿರುವುದರ ಕುರಿತು ಆಕ್ಷೇಪಣೆ ವ್ಯಕ್ತ ಪಡಿಸಿದರು ಹಾಗೂ ಸ್ಮಾರ್ಟ್ ಸಿಟಿ ಯೋಜನೆಗೆ ಸಂಬಂದಿಸಿದಂತೆ ಮಾಹಿತಿಗಳನ್ನು ಪತ್ರ ಮುಖೇನ ಕೋರಿದ್ದು,15 ದಿನಗಳಾದರೂ ಮಾಹಿತಿ ನೀಡದಿರುವ ಬಗ್ಗೆ ಸಹ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಸ್ಮಾರ್ಟ್ ಸಿಟಿಗೆ ಸಂಬಂದಿಸಿದಂತೆ ಗೈಡ್ ಲೈನ್ಸ್ ಪ್ರತಿಯನ್ನು ಹಾಗೂ ಇನ್ನಿತರ ಮಾಹಿತಿಗಳನ್ನು ಒದಗಿಸಿದ ನಂತರ ಮರು ಸಭೆಯನ್ನು ನಿಗದಿ ಪಡಿಸುವಂತೆ ಕೋರಿದರು.

ಇದಕ್ಕೆ ಸಂಬಂದಿಸಿದಂತೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮಾಹಿತಿಗಳ ಉತ್ತರಗಳನ್ನು ತಯಾರಿಸಿದ್ದು ಪರಿಶೀಲಿಸಿ ಒದಗಿಸುವ ಬಗ್ಗೆ ಸಭೆಗೆ ತಿಳಿಸಿದರು.

ಮಾನ್ಯ ಶಾಸಕರಾದ ಶ್ರೀ.ಕೆ.ಎಸ್.ಈಶ್ವರಪ್ಪ ರವರು ಮಾತನಾಡಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಸ್ಮಾರ್ಟ್ ಸಿಟಿ ಗೈಡ್ ಲೈನ್ಸ್ ಗಳ ಪ್ರತಿಯನ್ನು ಒದಗಿಸಲು ಹಾಗು ಮರು ಸಭೆಯನ್ನು ದಿನಾಂಕ:17.10.2018ರಂದು ನಡೆಸಲು ತಿಳಿಸಿದರು.

ಮುಂದಿನ ಸಭೆಯನ್ನು ದಿನಾಂಕ:17.10.2018ರಂದು ಜರುಗಿಸಲು ತೀರ್ಮಾನಿಸಿ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾದಿಕಾರಿಗಳು
ಶಿವಮೊಗ್ಗ ಜಿಲ್ಲೆ,ಶಿವಮೊಗ್ಗ

ಪ್ರತಿಯನ್ನು:

1. ಸನ್ಮಾನ್ಯ ಶ್ರೀ.ಕೆ.ಎಸ್.ಈಶ್ವರಪ್ಪ ರವರು, ಶಾಸಕರು, ವಿಧಾನಸಭೆ. ಶಿವಮೊಗ್ಗ ನಗರ ಇವರಿಗೆ ಸಲ್ಲಿಸಿದೆ.
2. ಸನ್ಮಾನ್ಯ ಶ್ರೀ.ಕೆ.ಬಿ.ಅಶೋಕ್ ನಾಯ್ಕ ರವರು. ಶಾಸಕರು, ವಿಧಾನಸಭೆ, ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ, ಶಿವಮೊಗ್ಗ ಇವರಿಗೆ ಸಲ್ಲಿಸಿದೆ.
3. ಸನ್ಮಾನ್ಯ ಶ್ರೀ.ಆರ್.ಪ್ರಸನ್ನ ಕುಮಾರ್‌ರವರು, ಶಾಸಕರು, ವಿಧಾನ ಪರಿಷತ್ ಇವರಿಗೆ ಸಲ್ಲಿಸಿದೆ.
4. ಸನ್ಮಾನ್ಯ ಶ್ರೀ.ಆಯನೂರ್ ಮಂಜುನಾಥ್‌ರವರು, ಶಾಸಕರು, ವಿಧಾನ ಪರಿಷತ್ ಇವರಿಗೆ ಸಲ್ಲಿಸಿದೆ.
5. ಸನ್ಮಾನ್ಯ ಶ್ರೀ.ರುದ್ರೇಗೌಡ ರವರು, ಶಾಸಕರು, ವಿಧಾನ ಪರಿಷತ್ ಇವರಿಗೆ ಸಲ್ಲಿಸಿದೆ.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಲಯ, ಬೆಂಗಳೂರು ಇವರಿಗೆ ಸಲ್ಲಿಸಿದೆ.
7. ಜಿಲ್ಲಾ ರಕ್ಷಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
8. ಮಾನ್ಯ ಆಯುಕ್ತರು, ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ.
9. ಅಧ್ಯಕ್ಷರು, ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘ (ರಿ.), ಶಿವಮೊಗ್ಗ
10. ಅಧ್ಯಕ್ಷರು, ಕೊಳಚೆ ನಿರ್ಮೂಲನಾ ಮಂಡಳಿ, ಶಿವಮೊಗ್ಗ.
11. ಅಧ್ಯಕ್ಷರು, ನಾಗರೀಕ ಹಿತರಕ್ಷಣಾ ವೇದಿಕೆ, ಶಿವಮೊಗ್ಗ
12. ಅಧ್ಯಕ್ಷರು, ನಗರ ಮಟ್ಟದ ಒಕ್ಕೂಟ (ಸಿ.ಎಲ್.ಎಫ್.ಫೆಡರೇಷನ್), ಶಿವಮೊಗ್ಗ
13. ಪ್ರತಿನಿಧಿ, ತಾಂತ್ರಿಕ ಪರಿಣಿತರು, ಜೆ.ಎನ್.ಎನ್.ಸಿ.ಇ.ಕಾಲೇಜ್, ಶಿವಮೊಗ್ಗ
14. ಆಪ್ತ ಕಾರ್ಯದರ್ಶಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗರವರ ಮಾಹಿತಿಗಾಗಿ ಸಲ್ಲಿಸುತ್ತಾ ಸದರಿ ಸಭೆಯ ವಿಷಯವನ್ನು ಮಾನ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲು ಕೋರಲಾಗಿದೆ.
15. ಮುಖ್ಯ ಅಭಿಯಂತರರು/ ಪ್ರಧಾನ ವ್ಯವಸ್ಥಾಪಕರು (ಪ್ರಾಂ), ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
16. ಮುಖ್ಯ ಹಣಕಾಸು ಅಧಿಕಾರಿ, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
17. ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಮಹಾನಗರಪಾಲಿಕೆ, ಶಿವಮೊಗ್ಗ.
18. ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
19. ಕಚೇರಿ ಕಡತಕ್ಕೆ

MANGALURU SMART CITY LIMITED
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

Address: M.G. ROAD, LALBAGH, MANGALURU-575003, DAKSHINA KANNADA, KARNATAKA.
ವಿಳಾಸ: ಎಮ್.ಜಿ. ರಸ್ತೆ, ಲಾಲ್‌ಭಾಗ್, ಮಂಗಳೂರು – 575003, ದಕ್ಷಿಣಕನ್ನಡ, ಕರ್ನಾಟಕ.
CIN: U74999KA2017PLC102010 Phone: 0824-2220310
Email id: commissioner.mcc@gmail.com, smartcitymangaluru@gmail.com Website: www.mangalorecity.mrc.gov.in

Advisory Committee Meeting

Meeting Information

Date:	07/02/2018	Time:	11.30 AM – 12.00 PM
Day:	Wednesday	Location:	Court Hall, DC Office, Mangaluru
Chair:	Mr. Sasikanth Senthil	Deputy Commissioner, D.K. District and Director, MSCL	
Attendees:	Mr. Mohamad Nazeer	Commissioner, MCC and Managing Director, MSCL	
	Ms. Vathika Pai	President, Canara Chamber of Commerce	
	Mr. Abdul Rahaman	Executive Engineer, MSCL	
	Mr. Melwyn Rodrigues	IT In-charge, MSCL	
	Mr. Midhunraj S.N	Junior Urban Planner, MSCL	
	Ms. Preema Moras	Executive Assistant, MSCL	

Mr. Sasikanth Senthil S, Deputy Commissioner (DC) chaired the meeting and commenced the proceedings of the meeting.

MD, MSCL informed that Mangaluru Smart City Limited has formed a city level Advisory Forum, to advise and enable collaboration among various stakeholders towards the better functioning of Smart City programs as per Government Order. Forum includes the District Collector, Member of Parliament, Member of Legislative Assembly, Mayor, CEO of Special Purpose Vehicle (SPV), local youths, technical experts, and at least one member from the area who is a, President/Secretary representing registered Resident Welfare Association, Member of Registered Tax Payers Association/Rate Payer Association, President/Secretary of slum level federation, and Members of Non-Governmental Organisation (NGO) or Mahila Mandal/Chamber of Commerce/Youth organisation.

DC welcomed suggestions from the officials present for selecting Local youth, Registered Tax Payers Association and Slum level federation. DC recommended nominating Technical Experts with an architectural background and GIS experts by consulting with Bhoomi.

As the Honorary delegates were unable to attend the meeting due to Session in Parliament, DC advised convening a meeting next time with full-fledged officials.

The meeting was adjourned by Deputy Commissioner, D.K. district.

Approved by:

Deputy Commissioner, D.K. District

Copy to:

1. Hon. Mayor, Mangaluru City Corporation
2. Hon. Member of Parliament
3. Hon. Member of Legislative Assembly-North
4. Hon. Member of Legislative Assembly-South
5. Commissioner, MCC and Managing Director, MSCL
6. President, Canara Chamber of Commerce

ದಿನಾಂಕ 07.02.2018ರಂದು ಪೂರ್ವಾಹ್ನ 11.00 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಮಂಗಳೂರು ಸ್ಮಾರ್ಟ್ [illegible]
[illegible] ಸಮಿತಿಯ ಪ್ರಥಮ ಸಭೆಯ ಹಾಜರಾತಿ

ಕ್ರ.ಸಂ.	ಹೆಸರು/ಪದನಾಮ	ಇಮೇಲ್ ಐಡಿ	ಮೊಬೈಲ್ ನಂ.	ಸಹಿ
1.	ಮಾನ್ಯ ಜಿಲ್ಲಾಧಿಕಾರಿಗಳು. ದ.ಕ. ಜಿಲ್ಲೆ			[signature]
2.	ಪೂಜ್ಯ ಮಹಾಪೌರರು. ಮಂಗಳೂರು ಮಹಾನಗರಪಾಲಿಕೆ			
3.	ಮಾನ್ಯ ಲೋಕಸಭಾ ಸದಸ್ಯರು. ಮಂಗಳೂರು			
4.	ಮಾನ್ಯ ವಿಧಾನಸಭಾ ಸದಸ್ಯರು. ಮಂಗಳೂರು ದಕ್ಷಿಣ			
5.	ಮಾನ್ಯ ವಿಧಾನಸಭಾ ಸದಸ್ಯರು. ಮಂಗಳೂರು ಉತ್ತರ			
6.	ಅಧ್ಯಕ್ಷರು, ಕೆನರಾ ಚೇಂಬರ್ ಆಫ್ ಕಾಮರ್ಸ್ Vathika Pai	[illegible]@gmail.com	[illegible]	[signature]
7.	ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ಸ್ಮಾರ್ಟ್ ಸಿಟಿ ಲಿ.			[signature]
8.	[illegible]			
9)	[illegible]			[signature]
10)	Jr. OP, MSCL			[signature]
11.	Poornima Moras, Executive Asst.	MSCL		[signature]

MANGALURU SMART CITY LIMITED
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

MANGALURU SMART CITY ADVISORY FORUM MEETING - II

Meeting Information

Date:	29/09/2018	Time:	03.00PM - 7.00 PM
Day:	Saturday	Place:	Court Hall, D.C. Office, Mangaluru
Chairman:	Sri. Sasikanth Senthil	Deputy Commissioner, Dakshina Kannada District	
Present:	As per Attendance Sheet Attached		

Sri. Sasikanth Senthil, Chairman welcomed all the members and commenced the proceedings of the meeting.

Sri. Mohamad Nazeer, MD, MSCL with the permission of chair, briefed the members about Mangaluru Smart City Limited SPV's incorporation, Composition of Board and List of projects under its administration. He, then, explained the members about the smart city mission objective to develop the city with Area Based Development and PAN-city initiative in which Smart Solutions are applied covering larger parts of the city and briefed on the SCP projects.

